23 October 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಸಮುದ್ರವೂ ಕಸವನ್ನು ತನ್ನೊಡಲಲ್ಲಿ ಇಟ್ಟುಕೊಳ್ಳದೆ ದಡಕ್ಕೆ ದೂಡುತ್ತದೆ! ಮನುಷ್ಯರು ಮಾತ್ರ ಕಸದಂತಿರುವ ಮನಸ್ಸನ್ನು ಜೋಪಾನಗೈಯುತ್ತಾರೆ!

ಸ್ನೇಹಾ ಆನಂದ್

ಮೈಸೂರು ದಸರಾ ಗಿನ್ನಿಸ್ ದಾಖಲೆಯ ಡ್ರೋನ್ ಶೋ ಪುಟ ಸಂ. 2

ಹೋಗಿ ಬರ್ತೀವಿ ಮುಂದಿನ ದಸರೆಗೆ ಸಿಗೋಣ ಪುಟ ಸಂ. 3

ರಾಮನಗರ: ಅಚ್ಚುಕಟ್ಟಾಗಿ ನಡೆದ ಮಸ್ಟರಿಂಗ್ ಕಾರ್ಯ ಪುಟ ಸಂ. 3

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 302 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಸಚಿವರಿಗೆ ತಡೆ: ತನಿಖೆಗೆ ಆದೇಶ

ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಚನೆ

ಬೆಂಗಳೂರು: ಮೈಸೂರು ಅರಮನೆ ಆವರಣದಲ್ಲಿ ದಸರಾ ನಂದಿಧ್ವಜ ಪೂಜೆ ಸಂದರ್ಭ ಸಚಿವರಾದ ಬಾಲಕೃಷ್ಣ, ನರೇಂದ್ರಸ್ವಾಮಿ, ಬಸವಂತಪ್ಪ ಅವರನ್ನು ಪೂಜೆ ಆವರಣ ಪ್ರವೇಶಿಸಲು ಪೊಲೀಸ್ ಅಧಿಕಾರಿ ನಿರ್ಬಂಧಿಸಿದ ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ಶೀಘ್ರ ವರದಿ ನೀಡಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಸೂಚನೆ ನೀಡಿದ್ದಾರೆ.

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಸಂದರ್ಭದಲ್ಲಿ ದಲಿತ ಸಚಿವರನ್ನು ಪೊಲೀಸರು ತಡೆದಿದ್ದಾರೆ ಎಂಬ ವಿರೋಧ ಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸಿದ ಸಿಎಂ ಡಿ.ಕೆ.ಶಿವಕುಮಾರ್ ಅವರು, ದಸರಾ ಕಾರ್ಯಕ್ರಮಗಳು ಸುಗಮವಾಗಿ ನಡೆದಿವೆ. ಆದರೆ, ಧ್ವಜಸ್ತಂಭ ಪೂಜೆ ಸಂದರ್ಭದಲ್ಲಿ ಕೆಲವು ಅಧಿಕಾರಿಗಳು ಸಚಿವರನ್ನು ತಡೆದಿದ್ದು ಹೌದು ಎಂದು ಹೇಳಿದರು.

ಪೊಲೀಸ್ ಅಧಿಕಾರಿಗಳು ಮಂತ್ರಿಗಳನ್ನೇ ನಿರ್ಬಂಧಿಸುವ ಮೂಲಕ ಉದ್ಧಟತನದಿಂದ ವರ್ತಿಸಿದ್ದಾರೆ. ತಕ್ಷಣ ಖುದ್ದು ನಾನೇ ಮಧ್ಯಪ್ರವೇಶಿಸಿ ಮಂತ್ರಿಗಳ ಪ್ರವೇಶಕ್ಕೆ ಅನುವು ಮಾಡಿಕೊಟ್ಟಿದ್ದೇನೆ. ಆದರೂ ಅಧಿಕಾರಿಗಳ ಉಡಾಫೆ ಸಹಿಸಲು ಆಗುವುದಿಲ್ಲ. ಹೀಗಾಗಿ ಇದಕ್ಕೆ ಹೊಣೆಗಾರರು ಯಾರು ಎಂಬ ಬಗ್ಗೆ ವಿಚಾರಣೆ ನಡೆಸಿ ವರದಿ ನೀಡುವಂತೆ ಮುಖ್ಯ ಕಾರ್ಯದರ್ಶಿಗೆ ಆದೇಶಿಸಿದ್ದೇನೆ. ವರದಿ ಬಂದ ನಂತರ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ದಸರಾ ಮಹೋತ್ಸವ ಬಹಳ ಚೆನ್ನಾಗಿ ನಡೆಯಿತು. ಧ್ವಜಸ್ತಂಭದ ಬಳಿ ಯಾವುದೇ ಸಮಸ್ಯೆಯಾಗಿರಲಿಲ್ಲ. ಕೆಲವು ಅಧಿಕಾರಿಗಳು ಸಚಿವರನ್ನು ತಡೆದಿದ್ದರು. ಘಟನೆಗೆ ಸಂಬಂಧಿಸಿದಂತೆ ವಿಡಿಯೊ ದೃಶ್ಯಾವಳಿ ಪರಿಶೀಲಿಸುವಂತೆ ಸೂಚಿಸಿರುವುದಾಗಿ ತಿಳಿಸಿದರು.

ಪ್ರತಿಯೊಬ್ಬ ಸಚಿವರಿಗೂ ಒಂದೊಂದು ಜವಾಬ್ದಾರಿ ವಹಿಸುವಂತೆ ಸೂಚಿಸಿದ್ದೆ. ಕಾರ್ಯಕ್ರಮಕ್ಕೂ ಮುನ್ನ ಪೂರ್ವಾಭ್ಯಾಸವನ್ನೂ ನಡೆಸಿದ್ದೆವು ಎಂದರು.

ಮೈಸೂರು ದಸರಾ ನಂದಿಧ್ವಜ ಪೂಜೆ ಸಂದರ್ಭದಲ್ಲಿ ಸಿಎಂ ಜೊತೆಯಲ್ಲಿದ್ದ ಸಚಿವರಾದ ಶಿವರಾಜ ತಂಗಡಗಿ, ಕೆಎಸ್ ಬಸವಂತಪ್ಪ ಹಾಗೂ ಪಿಎಂ ನರೇಂದ್ರಸ್ವಾಮಿ ಅವರನ್ನು ಎಸ್‌ಪಿ ರಿಷ್ಯಂತ್ ಅಡ್ಡಗಟ್ಟಿ ನೀವು ಹೋಗೋದಿಕ್ಕೆ ಪರ್ಮಿಷನ್ ಇಲ್ಲ ಸರ್ ಎಂದು ನಿಲ್ಲಿಸಿದ್ದರು. ಮೂವರು ಸಚಿವರನ್ನು ಎಸ್ ಪಿ ರಿಷ್ಯಂತ್ ತಡೆದ ಘಟನೆ ವ್ಯಾಪಕ ಟೀಕೆಗೆ ಕಾರಣವಾಗಿದೆ.

ಆನೆ ಗಲಾಟೆ ಎಚ್ಚರಿಕೆ

ಶಿವಮೊಗ್ಗ ದಸರಾ ಮೆರವಣಿಗೆಯಲ್ಲಿ ಆನೆ ಗಾಬರಿಗೊಂಡು ಓಡಿ ದಾಂಧಲೆ ನಡೆಸಿದ ಘಟನೆ ಕುರಿತು ಮಾತನಾಡಿದ ಸಿಎಂ ಡಿ.ಕೆ ಶಿವಕುಮಾರ್, ಈ ಘಟನೆ ಎಚ್ಚರಿಕೆ ಗಂಟೆ. ಮುನ್ನೆಚ್ಚರಿಕೆ ವಹಿಸುವಂತೆ ಆಯೋಜಕರಿಗೆ ಮೊದಲೇ ಸೂಚಿಸಿದ್ದೆ. ಈ ಘಟನೆಯನ್ನು ಭವಿಷ್ಯದಲ್ಲಿ ಎಚ್ಚರಿಕೆಯಾಗಿ ಪರಿಗಣಿಸಬೇಕು ಎಂದು ಸೂಚಿಸಿದರು.

ಮೈಸೂರು ದಸರಾ ಸಂದರ್ಭದಲ್ಲಿಯೂ ಇಂತಹ ಘಟನೆ ಅರಿವು ನನಗಿತ್ತು. ಹೀಗಾಗಿಯೇ ಒಂದು ತಿಂಗಳ ಹಿಂದೆಯೇ ಸಚಿವ ರಾಮಲಿಂಗಾರೆಡ್ಡಿ ಅವರಿಗೆ ಬಹಳ ಎಚ್ಚರಿಕೆಯಿಂದ ಇರುವಂತೆ ತಿಳಿಸಿದ್ದೆ. ಆರಂಭದಲ್ಲಿ ಬೇರೆ ಆನೆಯನ್ನು ಬಳಸಲು ಉದ್ದೇಶಿಸಲಾಗಿತ್ತು. ಕೊನೆಗೆ ಪ್ರಶಾಂತ್

100 ರೂ. ಕೊಡದವನ ಕೊಲೆ: ಜೀವಾವಧಿ ಶಿಕ್ಷೆ

ಬೆಂಗಳೂರು: 100 ರೂಪಾಯಿ ನೀಡಲು ನಿರಾಕರಿಸಿದ ವ್ಯಕ್ತಿಯನ್ನು ಕೊಲೆ ಮಾಡಿದ್ದವನಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ಮತ್ತು 25,000 ರೂಪಾಯಿ ದಂಡ ವಿಧಿಸಿದೆ.

100 ರೂಪಾಯಿ ನೀಡಲು ನಿರಾಕರಿಸಿದ್ದಕ್ಕಾಗಿ ದಿನಾಕರನ್ ಎಂಬುವರನ್ನು ಕೊಲೆ ಮಾಡಿದ್ದ ವೀರಮಣಿಕಂಠ ಎಂಬಾತನನ್ನು ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದೆ.

ಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2018ರ ಜುಲೈ 17ರ ಸಂಜೆ ಘಟನೆ ನಡೆದಿತ್ತು. ವೀರಮಣಿಕಂಠ ಎಂಬಾತ ದಿನಕರನ್ ಬಳಿ 100 ರೂಪಾಯಿ ಕೇಳಿದನು. ಹಣ ಇಲ್ಲ ಎಂದು ಹೇಳಿದ್ದಕ್ಕೆ ಆರೋಪಿ ತನ್ನ ಬಳಿಯಿದ್ದ ಚಾಕುವಿನಿಂದ ದಿನಕರನ್ ಕುತ್ತಿಗೆಯ ಹಿಂಭಾಗಕ್ಕೆ ನಿರ್ದಯವಾಗಿ ಇರಿದು ಕೊಲೆ ಮಾಡಿದ್ದ.

ಬಾಲಕನಿಗೂ ಪೊಲೀಸರ ಲಾಠಿ ಏಟು: ಸ್ಥಿತಿ ಗಂಭೀರ

ಮೈಸೂರು: ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆ ವೀಕ್ಷಿಸಲು ಪೋಷಕರೊಂದಿಗೆ ಬಂದಿದ್ದ ನಾಲ್ಕು ವರ್ಷದ ಬಾಲಕನ ಮೇಲೆ ಪೊಲೀಸರು ಲಾಠಿ ಬೀಸಿದ್ದಾರೆ. ಆತನ ತಲೆಗೆ ಗಂಭೀರ ಗಾಯವಾಗಿದೆ. ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದಾನೆ.

ಗಾಯಗೊಂಡ ಬಾಲಕ ಶಿಶಿರ್. ತಲೆಗೆ ಗಂಭೀರ ಪೆಟ್ಟು ಬಿದ್ದ ಹಿನ್ನೆಲೆಯಲ್ಲಿ ಆತನನ್ನು ತಕ್ಷಣ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪೊಲೀಸರ ಲಾಠಿ ಏಟಿಗೆ ಬಾಲಕನ ತಲೆಯಿಂದ ತೀವ್ರ ರಕ್ತಸ್ರಾವವಾಗಿದೆ. ಇದರಿಂದ ಪೋಷಕರು ಆತಂಕಕ್ಕೊಳಗಾಗಿದ್ದಾರೆ. ವೈದ್ಯರು ತಲೆಯ ಗಾಯಕ್ಕೆ ತುರ್ತು ಚಿಕಿತ್ಸೆ ನೀಡಿ ಹೊಲಿಗೆ ಹಾಕಿದ್ದಾರೆ ಬಾಲಕ ಆರೋಗ್ಯ ಸ್ಥಿತಿ ಕುಟುಂಬಸ್ಥರಲ್ಲಿ ತೀವ್ರ ಆತಂಕ ಮೂಡಿಸಿದೆ.

ಮೈಸೂರಿನ ಹೈವೇ ಸರ್ಕಲ್ ಬಳಿ ಭಾರೀ ಜನಸಂದಣಿ ನಿಯಂತ್ರಿಸುವ ವೇಳೆ ಪೊಲೀಸರು ನಡೆಸಿದ ಲಾಠಿಚಾರ್ಜ್‌ನಲ್ಲಿ ಬಾಲಕನಿಗೆ ಲಾಠಿ ಏಟು ಹಾಕಲಾಗಿದೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

ಘಟನೆ ಕುರಿತು ನೋವು ವ್ಯಕ್ತಪಡಿಸಿರುವ ಬಾಲಕನ ಪುಟ 2ಕ್ಕೆ

ಆನೆಗಳ ಬಳಕೆಗೆ ಮಾರ್ಗಸೂಚಿ: ಸಚಿವ ರಾಮಲಿಂಗಾರೆಡ್ಡಿ ಸೂಚನೆ

ಬೆಂಗಳೂರು: ಅರಣ್ಯ ಇಲಾಖೆ ಹಾಗೂ ಖಾಸಗಿಯವರ ಸಾಕಾನೆಗಳನ್ನು ಸಾರ್ವಜನಿಕ ಸಮಾರಂಭಗಳಲ್ಲಿ ಬಳಸಲು ಅನುಕೂಲವಾಗುವಂತೆ ಸೂಕ್ತ ಮಾರ್ಗಸೂಚಿ ರೂಪಿಸುವಂತೆ ಅರಣ್ಯ ಸಚಿವ ರಾಮಲಿಂಗಾರೆಡ್ಡಿ ಸೂಚನೆ ನೀಡಿದ್ದಾರೆ.

ಶಿವಮೊಗ್ಗದಲ್ಲಿ ನಡೆದ ದಸರಾ ಮಹೋತ್ಸವದ ವೇಳೆ ಸೋಮಣ್ಣ ಎಂಬ ಆನೆ ಗದ್ದಲ ನಡೆಸಿದ ಹಿನ್ನೆಲೆಯಲ್ಲಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಸಚಿವರು ನಿರ್ದೇಶನ ನೀಡಿದ್ದಾರೆ.

ರಾಜ್ಯದ ವಿವಿಧ ಭಾಗಗಳಲ್ಲಿ ದಸರಾ ಸಹಿತ ವಿವಿಧ ಉತ್ಸವಗಳು, ಜಾತ್ರೆಗಳು, ಧಾರ್ಮಿಕ ಕಾರ್ಯಕ್ರಮಗಳಿಗೆ ಈಗಲೂ ಆನೆಗಳನ್ನು ಬಳಕೆ ಮಾಡಲಾಗುತ್ತಿದೆ. ಅದರಲ್ಲೂ ಸಾರ್ವಜನಿಕವಾಗಿ ಲಕ್ಷಾಂತರ ಮಂದಿ ಸೇರುವ ಪುಟ 2ಕ್ಕೆ

ಸಚಿವರ ಸೂಚನೆ ಏನು?

- ಪ್ರಸ್ತಾವಿತ ಮಾರ್ಗಸೂಚಿಗಳ ಪ್ರಕಾರ, ಕಾರ್ಯಕ್ರಮ ಆಯೋಜಕರು ಕಾರ್ಯಕ್ರಮ ನಡೆಯುವ ಕನಿಷ್ಠ ಒಂದು ತಿಂಗಳ ಮುಂಚಿತವಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯಬೇಕು.
- ಮೆರವಣಿಗೆಯಲ್ಲಿ ಭಾಗವಹಿಸುವ ಆನೆಗಳಿಗೆ ಕನಿಷ್ಠ 20 ದಿನಗಳ ತರಬೇತಿ ಕಡ್ಡಾಯ. ಇದನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು.
- ಅನುಮತಿ ನೀಡುವ ಮೊದಲು, ಆನೆಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿ ಇದೆಯೇ ಹಾಗೂ ಜನಸಂದಣಿ, ಗದ್ದಲ ಮತ್ತು ಜೋರಾದ ಶಬ್ದಗಳನ್ನು ನಿಭಾಯಿಸಬಲ್ಲವೇ ಎಂಬುದನ್ನು ಖಚಿತಪಡಿಸಬೇಕು.
- ಆನೆಗಳಿಗೂ ಮತ್ತು ಸಾರ್ವಜನಿಕರಿಗೂ ರಕ್ಷಣೆ ಒದಗಿಸಲು ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು. ಯಾವುದೇ ಬಾಹ್ಯ ಒತ್ತಡಗಳಿಗೆ ಮಣಿಯದೆ, ಸ್ಪಷ್ಟ ಮತ್ತು ಸಮಗ್ರ ಮಾರ್ಗಸೂಚಿಗಳನ್ನು ತುರ್ತಾಗಿ ಹೊರಡಿಸಿ ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

ದಸರಾ ಗಜಪಡೆಗೆ ಬೀಳ್ಕೊಡುಗೆ

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆ ಆವರಣದ ತಾತ್ಕಾಲಿಕ ಆನೆ ಕ್ಯಾಂಪ್‌ನಲ್ಲಿ ದಸರಾ ಗಡೆಪಡೆಗಳಿಗೆ ಗುರುವಾರ ಮಧ್ಯಾಹ್ನ ಭಾವುಕ ಬೀಳ್ಕೊಡುಗೆ ನೀಡಲಾಯಿತು.

ಗುರುವಾರ ಬೆಳಿಗ್ಗೆ ಗಜಪಡೆ ತೂಕ ಪರೀಕ್ಷೆಯ ಬಳಿಕ ಅರಮನೆ ಪುರೋಹಿತ ಪ್ರಹ್ಲಾದ್ ರಾವ್ ಆನೆಗಳಿಗೆ ಪೂಜೆ ಮಾಡಿದರು. ಅರಣ್ಯ ಇಲಾಖೆ ಅಧಿಕಾರಿಗಳು ಪುಷ್ಪಾರ್ಚನೆ ನಡೆಸಿ ಆರತಿ ಬೆಳಗಿದರು.

ದಸರಾಗೆ ಮೊದಲ ಹಂತದಲ್ಲಿ ಬಂದಿದ್ದ 9, ಎರಡನೇ ಹಂತದಲ್ಲಿ ಬಂದ 3 ಹಾಗೂ ಕೊನೆಯಲ್ಲಿ ಬಂದ ಅಭಿಮನ್ಯು ಜೊತೆಯಾಗಿ ಕಾಡಿನ ಕಡೆ ಮುಖ ಮಾಡಿದವು. ಮೊದಲ ಬಾರಿ ಅಂಬಾರಿ ಹೊತ್ತು ಯಶಸ್ವಿಯಾದ ಪ್ರಶಾಂತ ಆನೆ ಹಾಗೂ ಅಭಿಮನ್ಯುವನ್ನು ಕಾಣಲು ಜನ ಮುಗಿಬಿದ್ದರು.

ಜಯಮಾರ್ತಾಂಡ ದ್ವಾರದ ಹೊರಭಾಗದಲ್ಲಿ ಸೇರಿದ್ದ ಸಾವಿರಾರು ಜನರು ಅಭಿಮನ್ಯು ಮತ್ತು ಪ್ರಶಾಂತ ಆನೆಗಳನ್ನು ಕಣ್ತುಂಬಿಕೊಳ್ಳಲು ಮುಗಿಬಿದ್ದರು. ಧನಂಜಯ, ಸುಗ್ರೀವ, ಏಕಲವ್ಯ, ಮಹೇಂದ್ರ, ಶ್ರೀರಾಮ, ಗೋಪಿ, ಶ್ರೀಕಂಠ, ಕಾವೇರಿ, ಚೈತ್ರ, ರೂಪ, ಲಕ್ಷ್ಮಿ ಆನೆಗಳು ಲಾರಿ ಏರಿ ತೆರಳುತ್ತಿದ್ದಂತೆ ಕೈ ಬೀಸಿ ಭಾವನಾತ್ಮಕ ವಿದಾಯ ಹೇಳಿದರು.

ನಾಡಿಗೆ ಬಂದು ತೂಕ ಹೆಚ್ಚಿಸಿಕೊಂಡ ಗಜಪಡೆ

ಮೈಸೂರು: ದಸರಾ ಮಹೋತ್ಸವದ ನಂತರ ಗಜಪಡೆ ಮತ್ತೆ ಕಾಡಿಗೆ ತೆರಳುವ ಮೊದಲು ಪ್ರತಿ ವರ್ಷ ತೂಕ ಹಾಕಲಾಗುತ್ತದೆ.

ನಗರದಲ್ಲಿ ಗುರುವಾರ ಬೆಳಿಗ್ಗೆ ಕೊನೆಯ ತೂಕ ಪರೀಕ್ಷೆ ನಡೆಸಲಾಯಿತು. ಶ್ರೀಕಂಠ, ಸುಗ್ರೀವ 6 ಟನ್ ತೂಗಿದರು. ಸುಗ್ರೀವ ಹಿಂದೆ 5,850 ತೂಗಿದ್ದ ಈ ಬಾರಿ 6,105 ಕೆ.ಜಿ ತೂಗಿದೆ. ಶ್ರೀಕಂಠ 5,790 ಈ ಹಿಂದೆ ತೂಗಿತ್ತು ಈ ಬಾರಿ 6,105 ಕೆ.ಜಿ ತೂಗಿದೆ. 5,600 ಕೆ.ಜಿ ತೂಗಿದ್ದ ಏಕಲವ್ಯ 5,915 ಕೆ.ಜಿ ತೂಗಿದನು. ಅಭಿಮನ್ಯು 5,585 ಕೆ.ಜಿ, ರೂಪಾ 3,290 ಕೆ.ಜಿ, ಮಹೇಂದ್ರ 5,620 ಕೆ.ಜಿ, ಗೋಪಿ 5,415 ಕೆ.ಜಿ, ಸುಗ್ರೀವ 6,105 ಕೆ.ಜಿ, ಶ್ರೀರಾಮ 5,150 ಕೆ.ಜಿ, ಚೈತ್ರ 3,520 ಕೆ.ಜಿ, ಶ್ರೀಕಂಠ 6,040 ಕೆ.ಜಿ, ಏಕಲವ್ಯ 5,915 ಕೆ.ಜಿ, ಕಾವೇರಿ 3,285 ಕೆ.ಜಿ, ಪ್ರಶಾಂತ 5,425 ಕೆ.ಜಿ, ಲಕ್ಷ್ಮಿ 4,010 ಕೆ.ಜಿ, ಧನಂಜಯ 5,470 ಕೆ.ಜಿ ತೂಗಿತು. ಡಿಸಿಎಫ್ ಐ.ಬಿ.ಪ್ರಭುಗೌಡ, ಆರ್.ಎಫ್.ಓ ಯಶ್ಮಾ ನಾಚಮ್ಮ, ವೈದ್ಯ ಆದರ್ಶ್ ಇದ್ದರು.

ಭೂಮಿ ನೀಡದೆ ವಿಳಂಬ

ರಾಜ್ಯ ಸರ್ಕಾರದ ವಿರುದ್ಧ ಎಚ್‌ಡಿಕೆ ಆರೋಪ



ಮಂಡ್ಯ: ಮಂಡ್ಯ ಜಿಲ್ಲೆಯಲ್ಲಿ ನಿರ್ಮಾಣ ಮತ್ತು ಮೂಲಸೌಕರ್ಯ ಉಪಕರಣಗಳ ಪರೀಕ್ಷಾ ಕೇಂದ್ರ (ಸಿ.ಐ.ಇ ಕೇಂದ್ರ) ಹಾಗೂ ಎಲೆಕ್ಟ್ರಿಕ್ ವಾಹನ ಪರೀಕ್ಷಾ ಕೇಂದ್ರ (ಇ.ವಿ.) ಸ್ಥಾಪಿಸಲು ಭೂಮಿ ಮಂಜೂರು ಮಾಡದೆ ರಾಜ್ಯ ಸರ್ಕಾರ 10 ತಿಂಗಳಿಂದ ವಿಳಂಬ ಮಾಡುತ್ತಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಗುರುವಾರ ಪತ್ರ ಬರೆದಿರುವ ಅವರು, ಕೇಂದ್ರದ ಆಟೋಮೋಟಿವ್ ರಿಸರ್ಚ್ ಅಸೋಸಿಯೇಷನ್ ಆಫ್ ಇಂಡಿಯಾ (ಎ.ಆರ್.ಎ.ಐ) ಯೋಜನೆಗೆ ಸಂಬಂಧಿಸಿದ ಸಭೆಗಳ ನಡಾವಳಿ, ರಾಜ್ಯ–ಕೇಂದ್ರದ ಪತ್ರ ವ್ಯವಹಾರಗಳು ಹಾಗೂ ಇತರ ದಾಖಲೆಗಳನ್ನು ಬಿಡುಗಡೆ ಮಾಡಿದ್ದಾರೆ. ಸಿಎಂ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರಿಗೆ ಹಸ್ತಾಂತರಿಸಲಾಗಿದೆ. ಬಳಿಕ ಅವರೊಂದಿಗೂ ಕುಮಾರಸ್ವಾಮಿ ಚರ್ಚಿಸಿದ್ದಾರೆ.

ನಿರಂತರ ಪ್ರಯತ್ನಗಳ ಹೊರತಾಗಿಯೂ, ಸೂಕ್ತ ಭೂಮಿಯನ್ನು ಮಂಜೂರು ಮಾಡುವ ವಿಷಯ ಮಂಡ್ಯ ಜಿಲ್ಲಾಡಳಿತ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ (ಕೆ.ಐ.ಎ.ಡಿ.ಬಿ) ಪುಟ 2ಕ್ಕೆ

20 ಸಾವಿರ ಕೋಟಿ ಬರ ಪರಿಹಾರ ನೀಡಿ

ಪ್ರಧಾನಿ ಮೋದಿಗೆ ಡಿಸಿಎಂ ಡಾ.ಜಿ.ಪರಮೇಶ್ವರ್ ಪತ್ರ ಬರೆದು ಆಗ್ರಹ

ಬೆಂಗಳೂರು: ರಾಜ್ಯದಲ್ಲಿ ತೀವ್ರ ಬರ ಪರಿಸ್ಥಿತಿಯನ್ನು ಎದುರಿಸಲು ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿ ಅಡಿಯಲ್ಲಿ 20,585.73 ಕೋಟಿ ಪರಿಹಾರವನ್ನು ತುರ್ತಾಗಿ ಬಿಡುಗಡೆ ಮಾಡುವಂತೆ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ, ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಪ್ರತ್ಯೇಕ ಪತ್ರಗಳನ್ನು ಬರೆದಿದ್ದಾರೆ.

ರಾಜ್ಯದ ಬರಪರಿಸ್ಥಿತಿ ಗಂಭೀರತೆಯನ್ನು ವಿವರಿಸಿರುವ ಅವರು, ಕರ್ನಾಟಕದಲ್ಲಿ ಶೇ 35ರಷ್ಟು ಮಳೆ ಕೊರತೆಯಾಗಿದೆ. ವಾಡಿಕೆಯಂತೆ 852 ಮಿ.ಮೀ. ಮಳೆಯಾಗಬೇಕಿದ್ದು ಕೇವಲ 551 ಮಿ.ಮೀ. ಮಳೆಯಾಗಿದೆ. ಇದು 1956ರಿಂದೀಚೆಗೆ ದಾಖಲಾದ ಎರಡನೇ ಅತ್ಯಂತ ಕಡಿಮೆ ಮಳೆ ಎಂದು ತಿಳಿಸಿದ್ದಾರೆ.

ರಾಜ್ಯ ಸರ್ಕಾರ 226 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ಒಟ್ಟು 57.93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಹಾನಿಯಾಗಿದೆ. ಇದರಲ್ಲಿ 53.92 ಲಕ್ಷ ಹೆಕ್ಟೇರ್ ಕೃಷಿ

ಬೆಳೆಗಳು ಹಾಗೂ 4.01 ಲಕ್ಷ ಹೆಕ್ಟೇರ್ ತೋಟಗಾರಿಕಾ ಬೆಳೆಗಳು ಸೇರಿವೆ. ಕೃಷಿ ವೆಚ್ಚದ ಆಧಾರದ ಮೇಲೆ ಲೆಕ್ಕಹಾಕಲಾದ ಒಟ್ಟು ಆರ್ಥಿಕ ನಷ್ಟ 62,481.88 ಕೋಟಿಯಾಗಿದೆ ಎಂದು ವಿವರಿಸಿದ್ದಾರೆ.

ಬರ ಪರಿಹಾರಕ್ಕಾಗಿ ರಾಜ್ಯ ಸರ್ಕಾರ ಒಟ್ಟು 20,585.73 ಕೋಟಿ ಕೇಂದ್ರದ ನೆರವು ಕೋರಿ ಸಮಗ್ರ ಮನವಿ ಪತ್ರವನ್ನು ಸಲ್ಲಿಸಿದೆ. ಇದರಲ್ಲಿ ಬೆಳೆ ಹಾನಿಯ ಪರಿಹಾರ ಸಹಾಯಧನಕ್ಕಾಗಿ 6,128.70 ಕೋಟಿ, 61.91 ಲಕ್ಷ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಜೀವನೋಪಾಯ ಪರಿಹಾರವಾಗಿ 12,146.99 ಕೋಟಿ, ಕುಡಿಯುವ ನೀರಿನ ಪೂರೈಕೆಗಾಗಿ 1,727 ಕೋಟಿ ಹಾಗೂ ಪಶುಸಂಗೋಪನೆ ಮತ್ತು ಜಾನುವಾರುಗಳ ಸಂರಕ್ಷಣೆಗಾಗಿ 583.04 ಕೋಟಿ ನೆರವು ನೀಡುವಂತೆ ಮನವಿ ಮಾಡಿದ್ದಾರೆ.

ಶೀಘ್ರ ಬಿಡುಗಡೆಗೆ ಆಗ್ರಹ

ಕೇಂದ್ರ ಅಂತರ ಸಚಿವಾಲಯಗಳ ಅಧ್ಯಯನ ತಂಡ ಅಕ್ಟೋಬರ್ 3ರಿಂದ 6ರವರೆಗೆ ಕರ್ನಾಟಕಕ್ಕೆ ಭೇಟಿ ನೀಡಿ ಬರ ಪರಿಸ್ಥಿತಿ ಪರಿಶೀಲಿಸಿರುವುದನ್ನು ಪತ್ರ



ಕೃಷ್ಣ ವಂದನ

ಸ್ನೇಹಾ ಆನಂದ್

ಹೇ ಕೃಷ್ಣಾ !

ಕಳೆದು ಹೋಯಿತೇ ಕೃಷ್ಣಾ ,ಭರವಸೆಯ ಬೆಳಕು|
ಭಾರವಾಯಿತೇ ಬದುಕು, ಬವಣೆಯಲಿ ಬಿದ್ದು|
ಜಗಕೆ ಭಾರವಾದೆನೇ ಮನದಲೊಂದು ಅಳಕು|
ತಳುಕು ಹಾಕಬೇಡ ಮೋಹದ ಬಲೆಗೆ ಸೆಳೆದು||

ತನುವಿನಲ್ಲಿ ನೀನಿಂತು,ಮನವನು ನಡೆಸು|
ಕಣಕಣದಲೂ ನಿನ್ನ ಭಕ್ತಿಯ ಸೆರೆ ಕುಡಿಸು|
ಬದುಕಿನ ಭರವಸೆಯೇ,ಮನಸಿನಾಸರೆಯು|
ಕನಸು ಕಾಣೋ ಕಣ್ಣು ಕದ ಮುಚ್ಚಿದೆ ಹರಿಯೇ||

ದಣಿಕೆಯಾಗಿದೆ ಕೃಷ್ಣಾ , ಕಲಬೆರಕೆಯ ಬದುಕು|
ಸೋತು ಹೋಗಿದೆ ಮನವು ಕಾಣದೆ ಗೆಲುವು|
ಗುರಿ ಇಲ್ಲದ ಬದುಕು ಸವೆದು ಹೋಗುವದೆಂತು|
ಹೇಳು ಹೇಮಗಿರೀಶನೇ, ಹೇ ಪದುಮನಾಭ||

ನ್ಯಾಯರಥ ಅಭಿಯಾನಕ್ಕೆ ಚಾಲನೆ

ಮೈಸೂರು: ನಾಡಹಬ್ಬ ದಸರಾದ ಶುಭ ಸಂದರ್ಭದಲ್ಲಿ ಮೈಸೂರು ಜಿಲ್ಲೆಗೆ ಆಗಮಿಸಿರುವ ನ್ಯಾಯರಥ – ಚಕ್ರಗಳ ಮೇಲಿನ ಕಾನೂನು ಸಲಹಾ ಕೇಂದ್ರ ಬಹು ಉಪಯೋಗಿ ವಾಹನದ ಮೂಲಕ ಸಾರ್ವಜನಿಕರಿಗೆ ಕಾನೂನು ಅರಿವು ಮೂಡಿಸುವ ಅಭಿಯಾನಕ್ಕೆ ಅ. 20 ರಂದು ಅಧಿಕೃತ ಚಾಲನೆ ನೀಡಲಾಯಿತು.

ಈ ನ್ಯಾಯರಥ ವಾಹನವು ಅ. 25 ರವರೆಗೆ ಮೈಸೂರು ಅರಮನೆ ಬಳಿಯ ವಸ್ತುಪ್ರದರ್ಶನ ಮೈದಾನದಲ್ಲಿ ಕಾರ್ಯನಿರ್ವಹಿಸಲಿದೆ. ವಾಹನದಲ್ಲಿ ಪ್ಯಾನೆಲ್ ವಕೀಲರು, ಅರೆಕಾಲಿಕ ಕಾನೂನು ಸ್ವಯಂಸೇವಕರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಿಬ್ಬಂದಿಗಳು ಲಭ್ಯವಿದ್ದು, ಸಾರ್ವ ಜನಿಕರಿಗೆ ಕಾನೂನು ವಿಷಯಗಳಿಗೆ ಸಂಬಂಧಿಸಿದಂತೆ ಸಂಪೂರ್ಣ ಉಚಿತ ಸಲಹೆ ಮತ್ತು ನೆರವು ನೀಡ ಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆ ಯಲ್ಲಿ ಆಗಮಿಸಿ ಈ ಕಾನೂನು ಅರಿವು ಅಭಿಯಾನದ ಸೌಲಭ್ಯವನ್ನು ಪಡೆದುಕೊ ಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಚಿತ ಟೋಲ್ ಫ್ರೀ ಸಂಖ್ಯೆ 15100 ಅಥವಾ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಫೋನ್ ಸಂ: 0821-2330130 ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿನಲ್ಲಿ ಉಚಿತ ಕಾನೂನು ನೆರವಿಗೆ ಕರೆ

ಗುಂಡ್ಲುಪೇಟೆ: ಮಳೆಗೆ ರಸ್ತೆ ಜಲಾವೃತ

ಗುಂಡ್ಲುಪೇಟೆ: ತಾಲೂಕಿನ ಹೊನ್ನೇಗೌಡನಹಳ್ಳಿ ಮತ್ತು ಕಣ್ಣೇಗಾಲ ಗ್ರಾಮವನ್ನು ಸಂಪರ್ಕಿಸುವ ರಸ್ತೆ ಸಾಧಾರಣ ಮಳೆಗೆ ಜಲಾವೃತಗೊಂಡು ಕೆರೆಯಂತಾಗಿದ್ದು, ಗ್ರಾಮಸ್ಥರು ಸಂಚಾರಕ್ಕೆ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಸುರಿದ ಸಾಧಾರಣ ಮಳೆಗೆ ರಸ್ತೆಯ ಮೇಲೆ ನೀರು ನಿಂತಿದ್ದು, ಈ ಮಾರ್ಗದಲ್ಲಿ ಸಂಚರಿಸುವ ಗ್ರಾಮಸ್ಥರು, ರೈತರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಬ್ಯಾಂಕ್ ಸೇರಿದಂತೆ ವಿವಿಧ ಕೆಲಸಗಳಿಗೆ ತೆರಳುವ ಜನರು ಇದೇ ರಸ್ತೆಯನ್ನು ಅವಲಂಬಿಸಿದ್ದು, ಇಂತಹ ರಸ್ತೆಗಳಿಂದ ಸಾರ್ವಜನಿಕರು ಪರದಾಡುವಂತಾಗಿದೆ.

ಸಾಧಾರಣ ಮಳೆಗೆ ರಸ್ತೆಯಲ್ಲಿ ನೀರು ನಿಲ್ಲುವ ಪರಿಸ್ಥಿತಿ ಎದುರಾಗಿರುವಾಗ, ಮುಂದಿನ ದಿನಗಳಲ್ಲಿ ಹೆಚ್ಚು ಮಳೆಯಾದರೆ ಜನರ ಸ್ಥಿತಿ ಏನಾಗಬಹುದು ಎಂಬ ಆತಂಕ ಗ್ರಾಮಸ್ಥರನ್ನು ಕಾಡುತ್ತಿದೆ. ಸಾರ್ವಜನಿಕರಿಗೆ ಸುಗಮ ಸಂಚಾರದ ವ್ಯವಸ್ಥೆ ಕಲ್ಪಿಸಬೇಕಾದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಈ ಸಮಸ್ಯೆಯನ್ನು ಇನ್ನಾದರೂ ಗಂಭೀರವಾಗಿ ಪರಿಗಣಿಸಬೇಕು ಎಂಬ ಒತ್ತಾಯ

ಕೇಳಿಬಂದಿದೆ. ರಸ್ತೆಯಲ್ಲಿ ನೀರು ನಿಲ್ಲದಂತೆ ವೈಜ್ಞಾನಿಕ ಚರಂಡಿ ವ್ಯವಸ್ಥೆ ಕಲ್ಪಿಸುವುದರ ಜತೆಗೆ, ಹದಗೆಟ್ಟಿರುವ ರಸ್ತೆಯನ್ನು ತಕ್ಷಣ ದುರಸ್ತಿಗೊಳಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಗ್ರಾಮದ ರೈತ ಮುಖಂಡ ಗುರು ಆಗ್ರಹಿಸಿದ್ದಾರೆ.

ಮೊದಲ ಪುಟದಿಂದ

ಭೂಮಿ ನೀಡದೆ ವಿಳಂಬ

ಇನ್ನೂ ಭೂಮಿ ಮಂಜೂರಾತಿ ಇತ್ಯರ್ಥಗೊಂಡಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಎ.ಆರ್.ಎ.ಐ ತಂಡ ಕೆಳೆದ ಮಾರ್ಚ್ನಲ್ಲಿ ಬಸರಾಳು, ಮಂಡ್ಯ ಮೈಷುಗರ್ ಕಾರ್ಖಾನೆ ಹಾಗೂ ಕೆ.ಆರ್.ಪೇಟೆ ಪ್ರದೇಶಗಳನ್ನು ಪರಿಶೀಲಿಸಿತ್ತು. ಬಳಿಕ ಬಸರಾಳು ಮತ್ತು ಎಲೆಚಾಕನಹಳ್ಳಿ ಸ್ಥಳಗಳ ಮೌಲ್ಯಮಾಪನ ನಡೆದಿದೆ. ಸೆ.16ರ ಸಭೆಯಲ್ಲಿ ಬಸರಾಳಿನ ಸುಮಾರು 100 ಎಕರೆ ಭೂಮಿ ಸಿ.ಐ.ಇ ಕೇಂದ್ರಕ್ಕೆ ಸೂಕ್ತವಾಗಬಹುದು ಎಂದು ಚರ್ಚಿಸಲಾಯಿತು. ಇ.ವಿ. ಕೇಂದ್ರಕ್ಕೆ ಹೆಚ್ಚುವರಿ 60 ಎಕರೆ ಅಗತ್ಯವಿದೆ. ಸೆ.28ರಂದು ಎ.ಆರ್.ಎ.ಐ ಪರಿಷ್ಕೃತ ಪ್ರಸ್ತಾವ ಸಲ್ಲಿಸಿದರೂ ಭೂಮಿ ಮಂಜೂರಾಗಿಲ್ಲ ಎಂದು ಪತ್ರದಲ್ಲಿ ತಿಳಿಸಿದ್ದಾರೆ. ಈ ಕೇಂದ್ರಗಳು ವಾಹನ ಸಂಶೋಧನೆ, ಪರೀಕ್ಷೆ, ತಂತ್ರಜ್ಞಾನ ಅಭಿವೃದ್ಧಿ ಹಾಗೂ ಉದ್ಯೋಗ ಸೃಷ್ಟಿಗೆ ನೆರವಾಗಲಿವೆ. 2026-27ರ ರಾಜ್ಯ ಬಜೆಟ್ನಲ್ಲೂ ಸಿ.ಐ.ಇ ಕೇಂದ್ರಕ್ಕೆ ಭೂಮಿ ನೀಡುವ ಘೋಷಣೆಯಾಗಿದೆ ಎಂದು ಉಲ್ಲೇಖಿಸಿರುವ ಕುಮಾರಸ್ವಾಮಿ, ತಕ್ಷಣ ಭೂಮಿ ಮಂಜೂರು ಮಾಡುವಂತೆ ಸಿಎಂಗೆ ಆಗ್ರಹಿಸಿದ್ದಾರೆ.

ಆನೆ ಗಲಾಟೆ ಎಚ್ಚರಿಕೆ

ಆನೆ ಆಯ್ಕೆ ಮಾಡಿದ್ದೆವು. ಈ ಎಲ್ಲ ವಿಚಾರಗಳನ್ನೂ ಅವರಿಗೆ ತಿಳಿಸಿದ್ದೆ. ಆದರೆ, ಶಿವಮೊಗ್ಗ ದಸರಾದಲ್ಲಿ ನಿರ್ಲಕ್ಷ್ಯ ವಹಿಸಿದ್ದಾರೆ. ಅದೃಷ್ಟವಶಾತ್ ಯಾರಿಗೂ ಗಾಯವಾಗಿಲ್ಲ. ಇದು ಭವಿಷ್ಯಕ್ಕೆ ಎಚ್ಚರಿಕೆಯ ಗಂಟೆ ಎಂದು ಹೇಳಿದರು. ಶಿವಮೊಗ್ಗದ ಜಂಬೂ ಸವಾರಿ ಮೆರವಣಿಗೆಯಲ್ಲಿ ಚಾಮುಂಡೇಶ್ವರಿ ದೇವಿಯ ವಿಗ್ರಹವನ್ನು ಹೊತ್ತಿದ್ದ ಆನೆ ಗಾಬರಿಗೊಂಡು ಬೀದಿಗಳಲ್ಲಿ ಓಡಿದ್ದು, ವಾಹನಗಳಿಗೆ ಹಾನಿಯಾಗಿತ್ತು. ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಪಶುವೈದ್ಯರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿದ್ದರು.

ಬಾಲಕನಿಗೂ ಪೊಲೀಸರ ಲಾಠಿ ಏಟು

ತಂದೆ ಗಿರೀಶ್, ಪೊಲೀಸರ ಕ್ರಮದ ಬಗ್ಗೆ ಪ್ರಶ್ನೆ ಎತ್ತಿದ್ದಾರೆ. ನಾವು ನಮ್ಮ ಮಗನಿಗೆ ದಸರಾ ತೋರಿಸಬೇಕು ಎಂದು ಕರೆತಂದಿದ್ದೆವು. ಆದರೆ, ಆತ ರಕ್ತದ ಮಡುವಿನಲ್ಲಿ ಬಿದ್ದಿರುವುದನ್ನು ನೋಡಲು ನಮ್ಮಿಂದ ಸಾಧ್ಯವಾಗಲಿಲ್ಲ. ಇಷ್ಟು ಚಿಕ್ಕ ಮಗುವಿನ ಮೇಲೆ ಲಾಠಿ ಬೀಸುವ ಅಗತ್ಯವಿತ್ತೇ? ಎಂದು ಅವರು ಪ್ರಶ್ನಿಸಿದ್ದಾರೆ. ಬಾಲಕನ ತಲೆಗೆ ಗಂಭೀರ ಗಾಯವಾಗಿರುವುದರಿಂದ ಶಸ್ತ್ರಚಿಕಿತ್ಸೆ ನಡೆಸಬೇಕಾಗಬಹುದು ಎಂದು ವೈದ್ಯರು ತಿಳಿಸಿದ್ದಾರೆ. ತಲೆಬುರುಡೆಯನ್ನು ತೆರೆದು ರಕ್ತ ಹೆಪ್ಪುಗಟ್ಟಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ ಎಂದು ವೈದ್ಯರು ಹೇಳಿದ್ದಾರೆ ಎಂದು ತಂದೆ ತಿಳಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಮಾಜಿ ನಗರಪಾಲಿಕೆ ಸದಸ್ಯ ರಂಗಸ್ವಾಮಿ ಪ್ರತಿಕ್ರಿಯಿಸಿದ್ದು, ಬಾಲಕನಿಗೆ ಹೊಡೆದ ಪೊಲೀಸ್ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಅಧಿಕೃತ ದೂರು ನೀಡಲಾಗುವುದು ಎಂದು ತಿಳಿಸಿದರು.

ಆನೆಗಳ ಬಳಕೆಗೆ ಮಾರ್ಗಸೂಚಿ: ಸಚಿವ ರಾಮಲಿಂಗಾರೆಡ್ಡಿ ಸೂಚನೆ

ಕಾರ್ಯಕ್ರಮಗಳಲ್ಲೂ ಆನೆಗಳ ಬಳಕೆ ಇರುವುದರಿಂದ ಅರಣ್ಯ ಇಲಾಖೆ ಮುನ್ನೆಚ್ಚರಿಕೆ ಹೆಚ್ಚಿಸುವುದು ಸೂಕ್ತ. ಅದರಲ್ಲೂ ಆನೆಗಳ ಬಳಕೆಗೆ ಸಮಗ್ರ ಮಾರ್ಗಸೂಚಿ ಅಗತ್ಯವಿದೆ. ಇದರ ಪ್ರಕಾರವೇ ಆನೆಗಳನ್ನು ನಿರ್ವಹಿಸುವಂತಾಗಬೇಕು ಎಂದು ಸೂಚಿಸಿದ್ದಾರೆ.

ಸಾರ್ವಜನಿಕ ಉತ್ಸವದ ಸಂದರ್ಭಗಳಲ್ಲಿ ಸಿಡಿಮದ್ದುಗಳು, ಪಟಾಕಿ, ಸಂಗೀತ ವಾದ್ಯಗಳನ್ನು ಬಳಸಲಾಗುತ್ತದೆ. ಇದರಿಂದ ಸಾಕಾನೆಗಳು ಕಿರಿಕಿರಿ ಅನುಭವಿಸಿ ವರ್ತನೆ ಬದಲಾಯಿಸುವ ಸಾಧ್ಯತೆ ಇರುತ್ತದೆ. ಈ ಕಾರಣಕ್ಕೆ ಆನೆಗಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಕಡೆಗೆ ಅರಣ್ಯ ಇಲಾಖೆ ಅಧಿಕಾರಿಗಳು ಹೆಚ್ಚಿನ ಒತ್ತು ನೀಡಬೇಕು ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಶಿವಮೊಗ್ಗ ದಸರಾ ಮೆರವಣಿಗೆ ವೇಳೆ ಸಕ್ರೆಬೈಲು ಆನೆ ಶಿಬಿರದ 'ಸೋಮಣ್ಣ' ಎಂಬ ಆನೆ ಅಂಬಾರಿಯನ್ನು ಹೊತ್ತಿದ್ದಾಗ ಇದ್ದಕ್ಕಿದ್ದಂತೆ ನಿಯಂತ್ರಣ ತಪ್ಪಿತು. ಕಾರು ಮತ್ತು ಹಲವಾರು ದ್ವಿಚಕ್ರ ವಾಹನಗಳಿಗೆ ಹಾನಿಯಾಗಿ ಸ್ಥಳದಲ್ಲಿದ್ದ ಜನರಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಗಿನ್ನಿಸ್ ದಾಖಲೆಯ ಡ್ರೋನ್ ಶೋ

ಸಚಿವ ಕೆ.ಜೆ. ಜಾರ್ಜ್ ಮೆಚ್ಚುಗೆ | 3,473 ಡ್ರೋನ್‌ಗಳ ಮೂಲಕ ಆಕರ್ಷಕ ನವಿಲಿನ ಕಲಾಕೃತಿ

ಮೈಸೂರು: ವಿಶ್ವವಿಖ್ಯಾತ ಮೈಸೂರು ದಸರಾ ಡ್ರೋನ್ ಪ್ರದರ್ಶನದಲ್ಲಿ ಮತ್ತೊಂದು ಗಿನ್ನಿಸ್ ದಾಖಲೆ ನಿರ್ಮಿಸಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ಸಾಧನೆಯನ್ನು ಶ್ಲಾಘಿಸಿರುವ ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ದೀಪಾಲಂಕಾರ ವ್ಯವಸ್ಥೆ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ದಸರಾ ಜಂಬೂಸವಾರಿ ಮೆರವಣಿಗೆಯ ವೈಭವ, ಆಕರ್ಷಕ ಡ್ರೋನ್ ಪ್ರರ್ಶನವನ್ನು ವೀಕ್ಷಿಸಿದ ಇಂಧನ ಸಚಿವರು, "ಈ ಬಾರಿ 3,473 ಡ್ರೋನ್ ಗಳ ಮೂಲಕ ಆಕರ್ಷಕ ನವಿಲಿನ ಕಲಾಕೃತಿ ರಚಿಸಿ ಗಿನ್ನಿಸ್ ದಾಖಲೆ ಮಾಡುವ ಮೂಲಕ ದಸರಾ ವೈಭವವನ್ನು ಜಾಗತಿಕ ಮಟ್ಟದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಪ್ರಚುರ ಪಡಿಸುವಲ್ಲಿ ಇಂಧನ ಇಲಾಖೆ ಮತ್ತು ಸೆಸ್ಕ್ ಪ್ರಮುಖ ಪಾತ್ರ ವಹಿಸಿವೆ. ದಸರಾ ಮಹೋತ್ಸವಕ್ಕೆ ವಿದ್ಯುತ್ ದೀಪಾಲಂಕಾರವು ವಿಶಿಷ್ಟ ಮೆರುಗು ನೀಡಿದ್ದು, ನಗರದ 146 ಕಿ.ಮೀ ರಸ್ತೆಗಳು, 123 ವೃತ್ತಗಳು, ಪ್ರಮುಖ ಸ್ಥಳಗಳಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪಗಳಿಂದ ನಿರ್ಮಿಸಿರುವ 80 ಕಲಾಕೃತಿಗಳು ಮೈಸೂರಿನ ಅಂದವನ್ನು ಹೆಚ್ಚಿಸಿದೆ. ದಸರಾ ವೇಳೆ ವಿದ್ಯುತ್ ದೀಪಾಲಂಕಾರವನ್ನು ಸಮರ್ಪಕವಾಗಿ ನಿರ್ವಹಿಸುವುದರ ಜೊತೆಗೆ, ತಂತ್ರಜ್ಞಾನದ ಆಕರ್ಷಕ ಡ್ರೋನ್ ಪ್ರದರ್ಶನವನ್ನು ಆಯೋಜಿಸಿರುವುದು ಇಂಧನ ಇಲಾಖೆಯ ಕಾರ್ಯಕ್ಷಮತೆ ಹಾಗೂ ಸೆಸ್ಕ್‌ನ ತಾಂತ್ರಿಕ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಾಲ್ಕು ದಿನಗಳ ಕಾಲ ಡ್ರೋನ್ ಪ್ರದರ್ಶನ ನಡೆದಿದ್ದು, ವಿವಿಧ ಬಣ್ಣಗಳು ಹಾಗೂ ವಿನ್ಯಾಸಗಳ ಮೂಲಕ ರೂಪುಗೊಂಡ 12 ಆಕರ್ಷಕ ದೃಶ್ಯಗಳು ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದವು. ಇದರಲ್ಲಿ



3,473 ಡ್ರೋನ್‌ಗಳು ಆಕಾಶದಲ್ಲಿ ಮೂಡಿಸಿದ ನವಿಲಿನ ಕಲಾಕೃತಿ ವಿಶೇಷ ಆಕರ್ಷಣೆಯಾಗಿತ್ತು ಮಾತ್ರವಲ್ಲದೆ, ಗಿನ್ನಿಸ್ ದಾಖಲೆಗೆ ಪಾತ್ರವಾಗಿರುವುದು ಮೈಸೂರು ದಸರಾ ಮಹೋತ್ಸವದ ಪ್ರಮುಖ ಸಾಧನೆಗಳಲ್ಲಿ ಒಂದಾಗಿದೆ. ದಸರಾ ಸಂದರ್ಭದಲ್ಲಿ ನಗರದ ವಿದ್ಯುತ್ ದೀಪಾಲಂಕಾರ ವ್ಯವಸ್ಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ನಿರ್ವಹಿಸುವುದು ದೊಡ್ಡ ಜವಾಬ್ದಾರಿಯಾಗಿತ್ತು. ಲಕ್ಷಾಂತರ ಪ್ರವಾಸಿಗರು, ಸಾರ್ವಜನಿಕರು ಪಾಲ್ಗೊಳ್ಳುವ ಉತ್ಸವದಲ್ಲಿ ವಿದ್ಯುತ್ ವ್ಯವಸ್ಥೆಯ ಸಮರ್ಪಕ ನಿರ್ವಹಣೆ, ತಾಂತ್ರಿಕ ಸಿದ್ಧತೆ ಮತ್ತು ವಿವಿಧ ಹಂತಗಳ ಸಮನ್ವಯಕ್ಕೆ ಆದ್ಯತೆ ನೀಡಲಾಗಿದೆ. ಇಂಧನ ಇಲಾಖೆಯ ವ್ಯಾಪ್ತಿಯಲ್ಲಿ ಸೆಸ್ಕ್ ಕೈಗೊಂಡಿರುವ ಈ ಕಾರ್ಯಗಳು ದಸರಾ ಮಹೋತ್ಸವದ ವೈಭವ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದು ಅಭಿಪ್ರಾಯಪಟ್ಟರು.

"ಸಮರ್ಪಕ ವಿದ್ಯುತ್ ಸರಬರಾಜಿನ ಜವಾಬ್ದಾರಿಯೊಂದಿಗೆ ದಸರಾ ದೀಪಾಲಂಕಾರ ಮತ್ತು ನವೀನ ತಂತ್ರಜ್ಞಾನ ಆಧಾರಿತ ಪ್ರದರ್ಶನದಲ್ಲಿಯೂ ಸೆಸ್ಕ್ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿಯ ಸಂಘಟಿತ ಪ್ರಯತ್ನ, ತಾಂತ್ರಿಕ ಪರಿಣತಿ ಹಾಗೂ ನಿರಂತರ ಪರಿಶ್ರಮದಿಂದ ಈ ಸಾಧನೆ ಸಾಧ್ಯವಾಗಿದೆ. ಕಳೆದ ವರ್ಷ ಹುಲಿಯ

"ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವ ಕೆ.ಜೆ.ಜಾರ್ಜ್ ಮಾರ್ಗದರ್ಶನದಲ್ಲಿ ದಸರಾ ವಿದ್ಯುತ್ ದೀಪಾಲಂಕಾರ ಮತ್ತು ಡ್ರೋನ್ ಶೋ ಅತ್ಯಂತ ಯಶಸ್ವಿಯಾಗಿ ಜನಮೆಚ್ಚುಗೆ ಗಳಿಸಿತು. ದಸರಾ ವಿದ್ಯುತ್ ದೀಪಾಲಂಕಾರ ಮುಂದಿನ ಹತ್ತು(ಅ.31) ದಿನಗಳವರೆಗೆ ಇರಲಿದ್ದು. ಪ್ರವಾಸಿಗರು ಹಾಗೂ ಸಾರ್ವಜನಿಕರು ಅಗತ್ಯ ಸುರಕ್ಷತಾ ನಿಯಮಗಳನ್ನು ಪಾಲಿಸಿ, ಆಕರ್ಷಕ ದೀಪಾಲಂಕಾರದ ಸೌಂದರ್ಯ ಕಣ್ತುಂಬಿಕೊಳ್ಳಿ."

–ಎಂ.ಎಸ್.ಅರ್ಚನಾ

ವ್ಯವಸ್ಥಾಪಕ ನಿರ್ದೇಶಕ, ಚಾವಿಸನಿನಿ

ಆಕೃತಿಯನ್ನು ಡ್ರೋನ್‌ಗಳ ಮೂಲಕ ರೂಪಿಸಿ ದಾಖಲೆ ನಿರ್ಮಿಸಿದ್ದ ಸೆಸ್ಕ್, ಈ ಬಾರಿ ನವಿಲಿನ ಕಲಾಕೃತಿ ರಚಿಸಿ ಹೊಸ ದಾಖಲೆ ಬರೆಯುವ ಮೂಲಕ ತನ್ನ ಸಾಧನೆಯ ಹಾದಿಯನ್ನು ಮುಂದುವರಿಸಿದೆ. ಅಲ್ಲದೇ ದಸರಾವನ್ನು ಜಾಗತಿಕ ಪ್ರವಾಸೋದ್ಯಮದ ಪ್ರಮುಖ ಆಕರ್ಷಣೆಯನ್ನಾಗಿ ರೂಪಿಸುವ ನಿಟ್ಟಿನಲ್ಲಿ ವಿದ್ಯುತ್ ದೀಪಾಲಂಕಾರ ಮತ್ತು ಡ್ರೋನ್ ಪ್ರದರ್ಶನ ಮಹತ್ವದ ಕೊಡುಗೆ ನೀಡಿದೆ. ದಸರಾ ದೀಪಾಲಂಕಾರ ಹಾಗೂ ಡ್ರೋನ್ ಪ್ರದರ್ಶನ ಯಶಸ್ವಿಯಾಗಿ ಮೂಡಿಬರಲು ಕಾರಣರಾದ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷರಾದ ರಮೇಶ್ ಬಂಡಿಸಿದ್ದೇಗೌಡ, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಸೇರಿ ಈ ಸಾಧನೆಯ ಹಿಂದೆ ಶ್ರಮಿಸಿದ ಸೆಸ್ಕ್ ಅಧಿಕಾರಿಗಳು, ತಾಂತ್ರಿಕ ಸಿಬ್ಬಂದಿ ಹಾಗೂ ಇಂಧನ ಇಲಾಖೆಯ ಎಲ್ಲ ಸಂಬಂಧಪಟ್ಟ ಅಧಿಕಾರಿಗಳ ಕಾರ್ಯವನ್ನು ಅಭಿನಂದಿಸಿದರು.

ಎಚ್.ಡಿ.ಕೋಟೆ: ಅದ್ದೂರಿ ಕನ್ನಡ ರಾಜ್ಯೋತ್ಸವ ಆಚರಣೆಗೆ ನಿರ್ಧಾರ

ಎಚ್.ಡಿ.ಕೋಟೆ: ತಾಲ್ಲೂಕಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ 10 ಸಾಧಕರನ್ನು ಗುರುತಿಸಿ ಸನ್ಮಾನಿಸಲಾಗುವುದು ಎಂದು ತಹಶೀಲ್ದಾರ್ ಶ್ರೀನಿವಾಸ್ ತಿಳಿಸಿದರು.

ಪಟ್ಟಣದ ಆಡಳಿತ ಭವನದ ಸಭಾಂಗಣದಲ್ಲಿ ನಡೆದ ಕನ್ನಡ ರಾಜ್ಯೋತ್ಸವದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಗಡಿ ಭಾಗದಲ್ಲಿರುವ ಎಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಕನ್ನಡ ಭಾಷೆಯ ಬೆಳವಣಿಗೆ ಹಾಗೂ ಕನ್ನಡಾಭಿಮಾನ ಹೆಚ್ಚಿಸುವ ನಿಟ್ಟಿನಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ರಾಜ್ಯೋತ್ಸವದ ಅಂಗವಾಗಿ ತಾಲ್ಲೂಕಿನ ಎಲ್ಲ ಸರ್ಕಾರಿ ಕಚೇರಿಗಳನ್ನು ವಿದ್ಯುತ್ ದೀಪಗ ಳಿಂದ ಅಲಂಕರಿಸಲಾಗುವುದು ಎಂದು ತಿಳಿಸಿದರು.

ಪಟ್ಟಣದ ಪ್ರಮುಖ ರಸ್ತೆಗಳನ್ನು ಸಿಂಗರಿಸುವುದರ ಜತೆಗೆ, ಮೆರವಣಿಗೆಯಲ್ಲಿ ವಿವಿಧ ಇಲಾಖೆಗಳು ಹಾಗೂ ಸಂಘ-ಸಂಸ್ಥೆಗಳ ವತಿಯಿಂದ ಆಕರ್ಷಕ ಸ್ತಬ್ಧ ಚಿತ್ರಗಳನ್ನು ಪ್ರದರ್ಶಿಸಲು ಕ್ರಮ

ಕೈಗೊಳ್ಳಲಾಗುವುದು. ಕನ್ನಡದ ಹಿರಿಮೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಾಗುವುದು ಎಂದರು.

ಅಧಿಕಾರಿಗಳ ಗೈರಿಗೆ ಆಕ್ಷೇಪ:

ಸಭೆಗೆ ವಿವಿಧ ಇಲಾಖ

ಅಚ್ಚುಕಟ್ಟಾಗಿ ನಡೆದ ಮಸ್ಟರಿಂಗ್ ಕಾರ್ಯ

ಮತಗಟ್ಟೆಗಳತ್ತ ತೆರಳಿದ ಸಿಬ್ಬಂದಿ: ಮತದಾನಕ್ಕೆ ಸಕಲ ಸಜ್ಜು

ರಾಮನಗರ: ರಾಜ್ಯ ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯ ಮತದಾನ ಅ. 23ರ ಶುಕ್ರವಾರ ಬೆಳಿಗ್ಗೆ 8ರಿಂದ ಆರಂಭವಾಗಲಿದ್ದು, ಇದಕ್ಕೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಮತಗಟ್ಟೆ ಸಿಬ್ಬಂದಿಗೆ ಮತಪೆಟ್ಟಿಗೆಗಳು ಹಾಗೂ ಚುನಾವಣಾ ಸಾಮಗ್ರಿಗಳನ್ನು ವಿತರಿಸುವ ಪ್ರಮುಖ ಘಟ್ಟವಾದ ಮಸ್ಟರಿಂಗ್ ಕಾರ್ಯ ಗುರುವಾರ ಅಚ್ಚುಕಟ್ಟಾಗಿ ನೆರವೇರಿತು. ಮತದಾನ ಕರ್ತವ್ಯಕ್ಕೆ ನಿಯೋಜಿತರಾದ ಅಧಿಕಾರಿಗಳು ಮತ್ತು ಸಿಬ್ಬಂದಿ ತಮ್ಮ ತಮ್ಮ ಮತಗಟ್ಟೆಗಳತ್ತ ತೆರಳಿದರು.

ಅಧಿಕಾರಿಗಳಿಂದ ಮಾರ್ಗದರ್ಶನ

ರಾಮನಗರ ತಾಲ್ಲೂಕು ಆಡಳಿತ ಸೌಧದಲ್ಲಿ ನಡೆದ ಮಸ್ಟರಿಂಗ್ ಕಾರ್ಯದ ವೇಳೆ ಸಂಬಂಧಿಸಿದ ಅಧಿಕಾರಿಗಳು ಸ್ಥಳದಲ್ಲಿದ್ದು, ಪ್ರಕ್ರಿಯೆ ಸುಗಮವಾಗಿ ನಡೆಯಲು ಅಗತ್ಯ ವ್ಯವಸ್ಥೆಗಳನ್ನು ಮಾಡಿದ್ದರು. ಚುನಾವಣೆಯನ್ನು ಯಶಸ್ವಿಯಾಗಿ ನಡೆಸಲು ಅಧಿಕಾರಿಗಳು ಸಿಬ್ಬಂದಿಗೆ ನಿರ್ದೇಶನಗಳನ್ನು ನೀಡಿದರು.

ಮತಗಟ್ಟೆಗಳಿಗೆ ನೇಮಕಗೊಂಡ ಅಧಿಕಾರಿಗಳು ಮತ್ತು ಸಿಬ್ಬಂದಿ ಬೆಳಿಗ್ಗೆ 9 ಗಂಟೆಯಿಂದ ಮಸ್ಟರಿಂಗ್ ಕಾರ್ಯ ನಡೆದ ತಾಲ್ಲೂಕು ಆಡಳಿತ ಸೌಧದ ಆವರಣಕ್ಕೆ ಆಗಮಿಸತೊಡಗಿದರು. ಚುನಾವಣಾ ಕಾರ್ಯ ಹಾಗೂ ಮತಗಟ್ಟೆಗಳ ಬಂದೋಬಸ್ತ್‌ಗಾಗಿ ನಿಯೋಜಿಸಲಾಗಿದ್ದ ಪೊಲೀಸರೂ ಸ್ಥಳಕ್ಕೆ ಬಂದಿದ್ದರು. ಮತದಾನ ಪ್ರಕ್ರಿಯೆಗೆ ತೆರಳುವ ಅಧಿಕಾರಿಗಳು, ಸಿಬ್ಬಂದಿ ಹಾಗೂ ಪೊಲೀಸರನ್ನು ಕರೆದೊಯ್ಯಲು ಏಳು ಜೀಪ್‌ಗಳನ್ನು ಮಿನಿ ವಿಧಾನಸೌಧದ ಆವರಣದಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಮಸ್ಟರಿಂಗ್ ಕಾರ್ಯ ನಡೆದ ಮಿನಿ ವಿಧಾನಸೌಧಕ್ಕೆ ಆಗಮಿಸಿದ ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಹಾಗೂ ಉಪ ವಿಭಾಗಾಧಿಕಾರಿ ಬಿನೋಯ್ ಅವರು ಪ್ರಕ್ರಿಯೆಯ ಸಮಗ್ರ ವಿವರಗಳನ್ನು ಪಡೆದುಕೊಂಡರು. ಮತಗಟ್ಟೆ ಅಧಿಕಾರಿಗಳು ಮತ್ತು ಸಿಬ್ಬಂದಿಯೊಂದಿಗೆ ಮಾತನಾಡಿದ ಅಪರ ಜಿಲ್ಲಾಧಿಕಾರಿಗಳು, ಯಾವುದೇ ಆತಂಕವಿಲ್ಲದೆ ಧೈರ್ಯದಿಂದ ಹಾಗೂ ಪ್ರಾಮಾಣಿಕತೆಯಿಂದ ಚುನಾವಣಾ ಕರ್ತವ್ಯ ನಿರ್ವಹಿಸುವಂತೆ ನೈತಿಕ ಸ್ಥೈರ್ಯ ತುಂಬಿದರು.

ಅಚ್ಚುಕಟ್ಟಾದ ವ್ಯವಸ್ಥೆ

ಮಸ್ಟರಿಂಗ್ ಕಾರ್ಯ ಯಾವುದೇ ಗೊಂದಲಕ್ಕೆ ಆಸ್ಪದ ವಿಲ್ಲದೆ ಯಶಸ್ವಿಯಾಗಿ ನೆರವೇರಲು ಪೂರ್ವಭಾವಿಯಾಗಿ ಯೋಜನೆ ರೂಪಿಸಿ, ಅದರಂತೆ ಕಾರ್ಯಗತಗೊಳಿಸಲಾಗಿತ್ತು. ಚುನಾವಣಾ ಸಾಮಗ್ರಿ ಮತ್ತು ಮತಪೆಟ್ಟಿಗೆಗಳ ವಿತರಣೆ, ಮತಗಟ್ಟೆಗಳಿಗೆ ಸಿಬ್ಬಂದಿಯ ನಿಯೋಜನೆ ಹಾಗೂ ಚುನಾವಣಾ ಕರ್ತವ್ಯಕ್ಕೆ ತೆರಳಲು ಆಗಮಿಸಿದ್ದ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಕುಡಿಯುವ ನೀರು ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಮಸ್ಟರಿಂಗ್ ಕಾರ್ಯಕ್ಕೆ ಕೈಗೊಂಡ ವ್ಯವಸ್ಥೆಗಳ ಬಗ್ಗೆ ಹಲವು ಅಧಿಕಾರಿಗಳು ಮತ್ತು ಸಿಬ್ಬಂದಿ ತೃಪ್ತಿ ವ್ಯಕ್ತಪಡಿಸಿದರು. ಬಳಿಕ ಎಲ್ಲರೂ ತಮಗೆ ನಿಯೋಜಿಸಲಾದ ಮತಗಟ್ಟೆಗಳಿಗೆ ಮಾರ್ಗಾನುಸಾರ ವ್ಯವಸ್ಥೆಗೊಳಿಸಿದ್ದ ವಾಹನಗಳಲ್ಲಿ ತೆರಳಿದರು.

3,193 ಮತದಾರರು

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 1,688 ಪುರುಷರು ಹಾಗೂ 1,505 ಮಹಿಳೆಯರು ಸೇರಿ ಒಟ್ಟು 3,193 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಮತದಾನ ಕಾರ್ಯ ಅ. 23ರ ಶುಕ್ರವಾರ ಬೆಳಿಗ್ಗೆ 8ರಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಸುಗಮ ಮತದಾನಕ್ಕೆ ಜಿಲ್ಲಾಡಳಿತ ಅಗತ್ಯ ವ್ಯವಸ್ಥೆಗಳನ್ನು ಕೈಗೊಂಡಿದೆ. ಅರ್ಹ ಮತದಾರರು ತಪ್ಪದೆ ತಮ್ಮ ಮತದಾನದ ಹಕ್ಕು ಚಲಾಯಿಸುವ ಮೂಲಕ ಪ್ರಜಾಪ್ರಭುತ್ವದ ಹಬ್ಬದಲ್ಲಿ ಪಾಲ್ಗೊಳ್ಳಬೇಕು ಎಂಬುದು ಜಿಲ್ಲಾಡಳಿತದ ಆಶಯವಾಗಿದೆ.

ಜಿಲ್ಲೆಯಲ್ಲಿ ಒಂಬತ್ತು ಮತಗಟ್ಟೆಗಳ ಸ್ಥಾಪನೆ

ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಗೆ ಜಿಲ್ಲೆಯಲ್ಲಿ ಒಟ್ಟು ಒಂಬತ್ತು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ರಾಮನಗರ, ಚನ್ನಪಟ್ಟಣ, ಮಾಗಡಿ ಹಾಗೂ ಕನಕಪುರ ತಾಲ್ಲೂಕುಗಳಲ್ಲಿ ತಲಾ ಎರಡು ಮತಗಟ್ಟೆಗಳಿದ್ದು, ಹಾರೋಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಒಂದು ಮತಗಟ್ಟೆ ಸ್ಥಾಪಿಸಲಾಗಿದೆ. ಮಾಗಡಿ ತಾಲ್ಲೂಕಿನ ಭಾಗ ಸಂಖ್ಯೆ 47ರ ತಹಶೀಲ್ದಾರ್ ಕಚೇರಿಯ ಕೋರ್ಟ್ ಆವರಣದಲ್ಲಿ ಸ್ಥಾಪಿಸಿರುವ ಮತಗಟ್ಟೆಯಲ್ಲಿ 185 ಪುರುಷರು ಹಾಗೂ 126 ಮಹಿಳೆಯರು ಸೇರಿ ಒಟ್ಟು 311 ಮತದಾರರಿದ್ದಾರೆ. ಭಾಗ ಸಂಖ್ಯೆ 48ರ ಕುದೂರು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಸ್ಥಾಪಿಸಿರುವ ಮತಗಟ್ಟೆಯಲ್ಲಿ 161 ಪುರುಷರು ಹಾಗೂ 83 ಮಹಿಳೆಯರು ಸೇರಿ ಒಟ್ಟು 244 ಮತದಾರರಿದ್ದಾರೆ. ಮಾಗಡಿ ತಾಲ್ಲೂಕಿನಲ್ಲಿ ಒಟ್ಟು 555 ಮತದಾರರಿದ್ದು, ಇವರಲ್ಲಿ 346 ಪುರುಷರು ಹಾಗೂ 209 ಮಹಿಳೆಯರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ರಾಮನಗರ ತಾಲ್ಲೂಕಿನ ತಾಲ್ಲೂಕು ಆಡಳಿತ ಸೌಧದಲ್ಲಿರುವ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಎರಡು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಕೊಠಡಿ ಸಂಖ್ಯೆ 01ರ ಭಾಗ ಸಂಖ್ಯೆ 49ರಲ್ಲಿ 217 ಪುರುಷರು ಹಾಗೂ 272 ಮಹಿಳೆಯರು ಸೇರಿ ಒಟ್ಟು 489 ಮತದಾರರಿದ್ದಾರೆ. ಕೊಠಡಿ ಸಂಖ್ಯೆ 02ರ ಭಾಗ ಸಂಖ್ಯೆ 50ರಲ್ಲಿ 183 ಪುರುಷರು ಹಾಗೂ 161 ಮಹಿಳೆಯರು ಸೇರಿ ಒಟ್ಟು 344 ಮತದಾರರಿದ್ದಾರೆ. ರಾಮನಗರ ತಾಲ್ಲೂಕಿನಲ್ಲಿ ಒಟ್ಟು 833 ಮತದಾರರಿದ್ದು, ಇವರಲ್ಲಿ 400 ಪುರುಷರು ಹಾಗೂ 433 ಮಹಿಳೆಯರು ಮತ ಚಲಾಯಿಸಲಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನ ಭಾಗ ಸಂಖ್ಯೆ 51ರ ತಾಲ್ಲೂಕು ಆಡಳಿತ ಸೌಧದ ತಹಶೀಲ್ದಾರ್ ಕಚೇರಿಯಲ್ಲಿ ಸ್ಥಾಪಿಸಿರುವ ಮತಗಟ್ಟೆಯಲ್ಲಿ 370 ಪುರುಷರು ಹಾಗೂ 400 ಮಹಿಳೆಯರು ಸೇರಿ ಒಟ್ಟು 770 ಮತದಾರರಿದ್ದಾರೆ. ಭಾಗ ಸಂಖ್ಯೆ 52ರ ಕೋಡಂಬಳ್ಳಿಯ ನಾಡಕಚೇರಿಯಲ್ಲಿ ಸ್ಥಾಪಿಸಿರುವ ಮತಗಟ್ಟೆಯಲ್ಲಿ 95 ಪುರುಷರು ಹಾಗೂ 61 ಮಹಿಳೆಯರು ಸೇರಿ ಒಟ್ಟು 156 ಮತದಾರರಿದ್ದಾರೆ. ಚನ್ನಪಟ್ಟಣ ತಾಲ್ಲೂಕಿನಲ್ಲಿ ಒಟ್ಟು 926 ಮತದಾರರಿದ್ದು, ಇವರಲ್ಲಿ 465 ಪುರುಷರು ಹಾಗೂ 461 ಮಹಿಳೆಯರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಹಾರೋಹಳ್ಳಿ ತಾಲ್ಲೂಕಿನ ಭಾಗ ಸಂಖ್ಯೆ 53ರ ಕೆಪಿಎಸ್ ಜಿಎಚ್‌ಪಿಎಸ್ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸ್ಥಾಪಿಸಿರುವ ಮತಗಟ್ಟೆಯಲ್ಲಿ 101 ಪುರುಷರು ಹಾಗೂ 99 ಮಹಿಳೆಯರು ಸೇರಿ ಒಟ್ಟು 220 ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಕನಕಪುರ ತಾಲ್ಲೂಕಿನ ತಾಲ್ಲೂಕು ಆಡಳಿತ ಸೌಧದಲ್ಲಿರುವ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಎರಡು ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಕೊಠಡಿ ಸಂಖ್ಯೆ 101ರ ಭಾಗ ಸಂಖ್ಯೆ 54ರಲ್ಲಿ 192 ಪುರುಷರು ಹಾಗೂ 147 ಮಹಿಳೆಯರು ಸೇರಿ ಒಟ್ಟು 339 ಮತದಾರರಿದ್ದಾರೆ. ಕೊಠಡಿ ಸಂಖ್ಯೆ 102ರ ಭಾಗ ಸಂಖ್ಯೆ 55ರಲ್ಲಿ 184 ಪುರುಷರು ಹಾಗೂ 156 ಮಹಿಳೆಯರು ಸೇರಿ ಒಟ್ಟು 340 ಮತದಾರರಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ ಒಟ್ಟು 679 ಮತದಾರರಿದ್ದು, ಇವರಲ್ಲಿ 376 ಪುರುಷರು ಹಾಗೂ 303 ಮಹಿಳೆಯರು ಮತ ಚಲಾಯಿಸಲಿದ್ದಾರೆ.

ಹೋಗಿ ಬರ್ತೀವಿ ಮುಂದಿನ ದಸರೆಗೆ ಸಿಗೋಣ

ಗಜಪಡೆಗೆ ಆತ್ಮೀಯ ಬೀಳ್ಕೊಡುಗೆ, ಬಾರದ ಮನಸ್ಸಲ್ಲೇ ಹೊರಟ ಕಾವಾಡಿ, ಮಾವುತರು

ಮೈಸೂರು: ಹೋಗಿ ಬರ್ತೀವಿ ಮುಂದಿನ ದಸರೆಗೆ ಮತ್ತೆ ಸಿಗೋಣ ಎಂದು ಲಾರಿ ಏರಿ ತಮ್ಮದೇ ಭಾಷೆಯಲ್ಲಿ ಸೊಂಡಿಲೆತ್ತಿ ನಮಸ್ಕರಿಸಿದ ಗಜಪಡೆಯ ಒಂದೆಡೆಯಾದರೆ ಹಬ್ಬದ ಸಂಭ್ರಮ ಬಣ್ಣ ಮಾಸುವ ಮುನ್ನವೇ ತಮ್ಮೂರಿನತ್ತ ತೆರಳಲು ಭಾರವಾದ ಮನಸ್ಸಿನಲ್ಲೇ ಕಾಡಿನತ್ತ ಪಯಣ ಬೆಳೆಸಿದವರು ಗಜಪಡೆಯ ಮಾವುತ, ಕಾವಾಡಿ ಹಾಗೂ ಕುಟುಂಬದವರು ಸಂಭ್ರಮದಲ್ಲೇ ತೆರಳಿದರು.

ದಸರೆಯ ಕೇಂದ್ರ ಬಿಂದುಗಳಾಗಿ ಅರಮನೆ ಆವರಣದಲ್ಲಿ 55ದಿನಗಳಿಂದ ಅತಿಥ್ಯದ ಅತಿಥಿಗಳಾಗಿದ್ದ ಗಜಪಡೆ ಗುರುವಾರ ಆತ್ಮೀಯವಾಗಿ ಬೀಳ್ಕೊಡಲಾಯಿತು. ಗುರುವಾರ ಬೆಳಿಗ್ಗೆ 12ಕ್ಕೆ ಗಜಪಡೆಯ ಮಾವುತ ಹಾಗೂ ಕಾವಾಡಿಗಳನ್ನು ಅರಮನೆ ಆಡಳಿತ ಮಂಡಳಿಯಿಂದ ಯಶಸ್ವಿ ಜಂಬೂ ಸವಾರಿ ನಡೆಸಿಕೊಟ್ಟ ಹಿನ್ನೆಲೆಯಲ್ಲಿ ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಲಾಯಿತು. ನಂತರ ಗಜಪಡೆಗಳೊಂದಿಗೆ ನೆನಪಿನ ಚಿತ್ರ ತೆಗೆದು ಆತ್ಮೀಯವಾಗಿ ಕಳುಹಿಸಿಕೊಡಲಾಯಿತು. ಆ ಮೂಲಕ ಕಳೆದ ಒಂದೂವರೆ ತಿಂಗಳಿಂದ ಅರಮನೆ ಆವರಣದಲ್ಲಿ ಬೀಡು ಬಿಟ್ಟಿದ್ದ ಗಜಪಡೆಗಳಾದ ಪ್ರಶಾಂತ, ಅಭಿಮನ್ಯು, ಶ್ರೀಕಂಠ, ಮಹೇಂದ್ರ, ಏಕಲವ್ಯ, ಧನಂಜಯ, ಗೋಪಿ, ಸುಗ್ರೀವ, ಶ್ರೀರಾಮ, ಲಕ್ಷ್ಮಿ, ರೂಪ, ಚೈತ್ರ, ಕಾವೇರಿ ಆನೆಗಳು ಯಶಸ್ವಿ ಜಂಬೂ ಸವಾರಿಯಲ್ಲಿ ತಮ್ಮ ಪಾತ್ರ ಮುಗಿಸಿ ಕಾಡಿನತ್ತ ತೆರಳಿದವು.

ಪ್ರತಿ ಬಾರಿ ಹೋಗಲೊಪ್ಪದೆ ಹಠ ಮಾಡುತ್ತಿದ್ದ ಮೂರಕ್ಕೂ ಹೆಚ್ಚು ಆನೆಗಳು ಈ ಬಾರಿ ಯಾವುದೇ ಮೊಂಡಾಟ ತೋರದೇ ಸಂತಸದಲ್ಲೇ ಲಾರಿ ಏರಿದವು. ಇತ್ತ ಅವುಗಳೊಟ್ಟಿಗೆ ಆಗಮಿಸಿದ್ದ ಕಾವಾಡಿ ಹಾಗೂ ಮಾವುತರ ಕುಟುಂಬದವರು ಹಾಗೂ ಮಕ್ಕಳು ಸಹ ನಗರ ಬಿಟ್ಟು ತಮ್ಮ ನೆಲೆಗಳತ್ತ ಹಿಂದುರುಗಲು ತಯಾರಿ ನಡೆಸಿದ ದೃಶ್ಯ ಕಂಡು ಬಂದಿತು. ಈ ವೇಳೆ ನೆರೆದಿದ್ದವರೆಲ್ಲರೂ ಹೋಗಿ ಬನ್ನಿ ಮತ್ತೆ ಮುಂದಿನ ದಸರೆಗೆ ಸಿಗೋಣ ಎಂಬಂತೆ ಬೀಳ್ಕೊಡುತ್ತಿದ್ದ ದೃಶ್ಯ ಕಂಡು ಬಂದಿತು. ಇನ್ನೂ ನಿನ್ನೆಯಷ್ಟೇ ಸಂಭ್ರಮದ ಜಂಬೂಸವಾರಿ ಯಶಸ್ವಿಗೊಳಿಸಿದ ಮಾವುತ, ಕಾವಾಡಿಗಳ ಕುಟುಂಬ ಸಂಭ್ರಮಿಸಲು ಅವಕಾಶವೇ ನೀಡದೇ ತರಾತುರಿಯಲ್ಲಿ ಭಾರವಾದ ಮನಸ್ಸಿನಲ್ಲೇ ತಮ್ಮೂರಿಗೆ ಲಾರಿಗಳಲ್ಲೇ ತೆರಳಿದರು.

ಸುಡುವ ಲಾರಿ ಹತ್ತದ ಸುಗ್ರೀವ

ಮಧ್ಯಾಹ್ನ 12ರ ಬಿಸಿಲಿನ ಸಂದರ್ಭದಲ್ಲೇ ಆನೆಗಳಿಗೆ ಬೀಳ್ಕೊಡುಗೆ ಆಯೋಜಿಸಲಾಗಿತ್ತು. ಇದರಿಂದಾಗಿ ಸುಡುವ ಬಿಸಿಲಿನಲ್ಲೇ ಆನೆಗಳು ಸಾಲಾಗಿ ನಿಂತು ಪೂಜೆಯಲ್ಲಿ ಭಾಗವಹಿಸಿದವು. ಬಳಿಕ ಹಲವು ಆನೆಗಳಿಗೆ ತಣ್ಣೀರು ಹಾಕಿ 2.30ರವರೆಗೂ ಕಾದು ಅನಂತರ ಕರೆದೊಯ್ಯಲಾಯಿತು. ಈ ಮಧ್ಯೆ ಬಿಸಿಲಿಗೆ ಲಾರಿ ಸುಡುತ್ತಿದ್ದ ಹಿನ್ನೆಲೆಯಲ್ಲಿ ಸುಗ್ರೀವ ಆನೆಯನ್ನು ಮಾವುತ ಮೇಲೆತ್ತಿಸಲು ಯತ್ನಿಸಿದರು. ಈ ವೇಳೆ ಲಾರಿ ಹತ್ತಲು ಹಿಂದೇಟು ಹಾಕಿದರು. ಬಳಿಕ ಲಾರಿಯನ್ನು ತೆಗೆದುಕೊಂಡು ಹೋಗಿ ಸಂಪೂರ್ಣ ನೀರು ಹಾಕಿ ತಂದ ಬಳಿಕ ಲಾರಿ ಹತ್ತಿದ ಘಟನೆ ನಡೆಯಿತು.

ಕಾಲ ನಾಡಹಬ್ಬ ದಸರಾಗೆ ಗಜಪಡೆಗಳನ್ನು ಸನ್ನದ್ಧಗೊಳಿಸಿದ್ದು, ಇದರ ಶ್ರಮವಾಗಿ ಪ್ರಶಾಂತ ಆನೆ ಪ್ರಶಾಂತವಾಗಿ ನಾಡಹಬ್ಬವನ್ನು ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ನಡೆಸಿಕೊಟ್ಟಿದ್ದಾನೆ. ಎಲ್ಲ ಆನೆಗಳ ತೂಕವನ್ನು ಹಾಗೂ ಆರೋಗ್ಯವನ್ನು ತಪಾಸಣೆ ಮಾಡಿದ್ದು, ಎಲ್ಲಾ ಆನೆಗಳು ಆರೋಗ್ಯವಾಗಿವೆ. ಇವತ್ತು ಗುರುವಾರ ಮರಳಿ ಎಲ್ಲಾ ಗಜಪಡೆಗಳನ್ನು ಆನೆ ಶಿಬಿರಕ್ಕೆ ಮರಳಿ ಕಳುಹಿಸಲಾಗುವುದು. ಇಲಾಖೆ ವತಿಯಿಂದ ಗೌರವ ನೀಡಿ ಮಾವುತ ಹಾಗೂ ಕಾವಾಡಿ ಕುಟುಂಬವನ್ನು ಕಳುಹಿಸಲಾಗುವುದು. ಆನೆಗಳು ಆನೆ ಶಿಬಿರದಲ್ಲಿ ಅರಣ್ಯ ಇಲಾಖೆ ನೀಡಿದ ಗೈಡ್ಲೈನ್ಸ್ ಪ್ರಕಾರ ತಮ್ಮ ಕೆಲಸಗಳನ್ನು ಮಾಡಿಕೊಂಡು ಇರುತ್ತವೆ. ಅಭಿಮನ್ಯು ಆನೆಯನ್ನು ಈಗಾಗಲೇ ನಿಶಾನೆ ಆನೆಯಾಗಿ ಮೆರವಣಿಗೆಯಲ್ಲಿ ಬಳಸಿಕೊಂಡು ಸಾಂಪ್ರದಾಯಿಕ ಬೀಳ್ಕೊಡುಗೆಯನ್ನು ಸಹ ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಅವ್ಯವಸ್ಥೆಯ ಆಗರ

ಅರಮನೆಗೆ ಹೆಚ್ಚಿನ ಪ್ರವಾಸಿಗರು ಆಗಮಿಸುವ ಮುನ್ಸೂಚನೆ ಇದ್ದರೂ ಸಹ ಸಾವಿರಾರು ಸಾರ್ವಜನಿಕರು ಆನೆಗಳ ಸಮೀಪವೇ ಬಂದು ನಿಂತಿದ್ದರು. ಅನೇಕರು ಆನೆಗಳ ಬಳಿ ಫೋಟೊ ಕ್ಲಿಕ್ಕಿಸಿಕೊಳ್ಳಲು ಮುಗಿಬಿದ್ದದ್ದರು. ಒಂದೆಡೆ ಅರಣ್ಯ ಇಲಾಖೆಯ ಸಿಬ್ಬಂದಿ ಮತ್ತೊಂದೆಡೆ ಪೊಲೀಸ್ ಸಿಬ್ಬಂದಿ ಭದ್ರತೆಯಿಂದ ನೋಡಿಕೊಳ್ಳುತ್ತಿದ್ದರೂ ಸಾವಿರಾರು ಮಂದಿ ಆನೆಗಳ ಬಳಿ ಬಂದಿದ್ದೂ ಹೇಗೆ?. ಭದ್ರತಾ ಇಲಾಖೆಯ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದಾಗಿ ಸಾವಿರಾರು ಮಂದಿ ಆಗಮಿಸಿದ್ದು ಆನೆ ಹಾಗೂ ಮಾವುತರಿಗೆ ಕಿರಿಕಿರಿಯುಂಟು ಮಾಡಿತ್ತಲ್ಲದೆ, ಅವ್ಯವಸ್ಥೆಗೆ ಹಿಡಿದ ಕನ್ನಡಿಯಾಯಿತು.

19ವರ್ಷಕ್ಕೆ ಅವಕಾಶ ಸಿಕ್ಕಿದ ಖುಷಿಯಿದೆ: ಮಾವು ಚಿನ್ನಪ್ಪ

ಮೈಸೂರು: ಸತತವಾಗಿ ದಸರೆಗೆ ಬರ್ತಿದ್ವಿ, ಹೋಗ್ತಿದ್ವಿ ನಮ್ಮ ಶಿಬಿರಕ್ಕೆ ಒಮ್ಮೆಯೂ ಅಂಬಾರಿ ಹೊರುವ ಅವಕಾಶ ಸಿಕ್ಕದಿರುವುದಕ್ಕೆ ಬೇಸರವಾಗಿ ಈ ಬಾರಿ ಬರಲ್ಲ ಎಂತಲೇ ಹೇಳಲು ಪ್ರಯತ್ನಿಸಿದ್ದೇವು. ಆದರೆ, ನಮಗೂ ಅವಕಾಶ ದೊರೆತು ಜಂಬೂ ಸವಾರಿಯನ್ನು ಯಶಸ್ವಿಯಾಗಿ ಹೊತ್ತು ಸೈ ಎನಿಸಿಕೊಂಡ ನಮ್ಮ ಪ್ರಶಾಂತ ಆನೆಯ ಬಗ್ಗೆ ಖುಷಿಯಾಗಿದೆ ಎಂದು ಆನೆಯ ಮಾವುತ ಚಿನ್ನಪ್ಪ ಸಂತೋಷ ಹಂಚಿಕೊಂಡರು.

ಈ ಬಾರಿಯ ಅದ್ಧೂರಿ ವೈಭವದ ಜಂಬೂ ಸವಾರಿಯಲ್ಲಿ ಮೊದಲ ಬಾರಿಗೆ ಚಿನ್ನದ ಅಂಬಾರಿಯನ್ನು ಹೊತ್ತು ಎರಡು ಗಂಟೆ ಸಮಯದಲ್ಲಿ ರಾಜ ಗಾಂಭೀರ್ಯದಿಂದ ಬನ್ನಿಮಂಟಪ ತಲುಪಿದ್ದ ಪ್ರಶಾಂತ ಆನೆ ಹೊಸ ಜಂಬೂಸವಾರಿ ಕ್ಯಾಪ್ಟನ್ ಆಗಿ ಹೊರಹೊಮ್ಮಿದೆ. ಬಲರಾಮ ಆನೆಯ ಹೋಲಿಕೆ ಪ್ರಶಾಂತ ಆನೆಯಲ್ಲಿ ಕಂಡುಬಂದಿದ್ದು, ಚಿನ್ನದ ಅಂಬಾರಿ ಹೊತ್ತು ಲಕ್ಷಾಂತರ ಜನಗಳ ಮಧ್ಯ ರಾಜಗಾಂಭೀರ್ಯದಿಂದ ಹೆಜ್ಜೆ ಹಾಕಿದ್ದು ಖುಷಿ ತಂದಿದೆ. ನಾನು 18 ವರ್ಷದಿಂದ ದಸರಾಕ್ಕೆ ಬರುತ್ತಿದ್ದೇನೆ. 18 ವರ್ಷಗಳ ಕಾಲ ಪ್ರಶಾಂತ ಜಂಬೂ ಸವಾರಿ ಮೆರವಣಿಗೆಯಲ್ಲಿ ಸಾಲಾನೆ ಆಗಿ ಹೋಗುತ್ತಿದ್ದ. ಈಗ 19ನೇ ವರ್ಷ ಅಂಬಾರಿ ಆನೆಯಾಗಿ ಆಯ್ಕೆಯಾಗಿದ್ದು, ನಂಬಿಕೆ ಉಳಿಸಬೇಕೆಂದು ಯಶಸ್ವಿಯಾಗಿ ಹಾಗೂ ಒಳ್ಳೆ ರೀತಿಯಲ್ಲಿ ಚಿನ್ನದ ಅಂಬಾರಿ ಹೊತ್ತು ಸಾಗಿದ್ದಾನೆ. ಇದರಿಂದ ಖುಷಿಯಾಗಿದೆ. ಎಲ್ಲ ರೀತಿಯ ಸಹಕಾರ ನೀಡಿದ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಆನೆ ಕಾಡಿನ ಶಿಬಿರದಲ್ಲಿ ಸೌಮ್ಯವಾಗಿ ಇರುತ್ತದೆ. ಅಲ್ಲಿ ಚಿಕ್ಕ ಮಕ್ಕಳು ಹೋದರೂ ಏನು ಮಾಡುವುದಿಲ್ಲವೆಂದರು. ಆನೆಗಳಿಗೆ ಕಾಡಿನಲ್ಲಿ ಸಿಗುವ ನಾನಾ ಬಗೆಯ ಸೊಪ್ಪುಗಳ ಇಷ್ಟವೇ ಹೊರತು ನಾವೇನೂ ಕೊಟ್ಟರೂ ಅವುಗಳೇ ತಿನ್ನುವ ಆಹಾರದ ಮುಂದೆ ಬೇರೆನೂ ಇಲ್ಲ. ಅದರಲ್ಲೂ ಪ್ರಶಾಂತನಿಗೆ ಬಿದಿರಿನ ಹುಲ್ಲು ಎಂದರೆ ತುಂಬಾ ಇಷ್ಟ ನಿತ್ಯ ಆತನನ್ನು ಕಾಡಿಗೆ ಬಿಡುತ್ತೇನೆ. ಸಂಜೆ 4ಕ್ಕೆ ಸರಿಯಾಗಿ ಶಿಬಿರಕ್ಕೆ ಬಂದೂ ಪ್ರವಾಸಿಗರಿಗೆ ಮುಖ ತೋರುತ್ತಾನೆ. ಅಧಿಕಾರಿಗಳು ಮುಂದಿನ ಐದು ವರ್ಷ ಈತನೇ ಹೊರುತ್ತಾನೆಂದು ಹೇಳಿದ್ದಾರೆ. ನೋಡೋಣ ಮುಂದಿನ ವರ್ಷ ಎನಾಗುತ್ತದೆ. ನಾನೇ ಸಾಕುತ್ತಿರುವ ಆನೆಯಾಗಿದ್ದರಿಂದ ಭಯ ಇರಲಿಲ್ಲ. ಆದರೆ, ಜವಾಬ್ದಾರಿಯನ್ನು ಮುಂದೆ ನಿಂತು ನಿಭಾಯಿಸಿದ ಖುಷಿ ಸಿಕ್ಕಿದೆ. ಈ ದಸರೆ ಸಂಭ್ರಮ ಇಷ್ಟು ಬೇಗ ಬಿಟ್ಟು ಹೋಗುವುದು ಬೇಸರ ನಿಜ. ಆದರೆ, ಅನಿವಾರ್ಯ ನಾವು ಕಾಡಿಗೆ ಮರಳಲೇ ಬೇಕೆಂದು ಹೇಳಿದರ

ಹಿರಿಯ ಸದಸ್ಯರು, ಮಾಜಿ ಅಧ್ಯಕ್ಷರು-ನಿರ್ದೇಶಕರಿಗೆ ಗೌರವಾರ್ಪಣೆ

ಧಾನ್ಯ ವ್ಯಾಪಾರಿಗಳ ಸಂಘಕ್ಕೆ ಶತಮಾನೋತ್ಸವ ಸಂಭ್ರಮ ಅ.25ಕ್ಕೆ

ತುಮಕೂರು: ನಗರದ ಧಾನ್ಯ ವ್ಯಾಪಾರಿಗಳ ಸಂಘಕ್ಕೆ 100 ವರ್ಷ ತುಂಬುತ್ತಿರುವ ಹಿನ್ನೆಲೆಯಲ್ಲಿ ಅ.25ರಂದು ಶತಮಾನೋತ್ಸವ ಸಂಭ್ರಮಾಚರಣೆ ಹಮ್ಮಿಕೊಳ್ಳಲಾಗಿದೆ. ಇದರ ಅಂಗವಾಗಿ ಸಂಘದ ಬೆಳವಣಿಗೆಗೆ ಸಹಕರಿಸಿದ ಹಿರಿಯ ಸದಸ್ಯರು, ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಗೌರವಿಸಲಾಗುವುದು ಎಂದು ಸಂಘದ ಅಧ್ಯಕ್ಷ ಬಿ.ಎಲ್.ಚಂದ್ರಕೀರ್ತಿ ತಿಳಿಸಿದರು.

ಗುರುವಾರ ನಗರದ ಎಪಿಎಂಸಿ ಆವರಣದಲ್ಲಿರುವ ಸಂಘದ ಬಹುಧಾನ್ಯಸಿರಿ ಕಟ್ಟಡದ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಆರ್‌ಟಿಪಿ ಕನ್ವೆನ್ಷನ್ ಹಾಲ್‌ನಲ್ಲಿ ಅಂದು ಬೆಳಿಗ್ಗೆ 10-30ಕ್ಕೆ ಸಮಾರಂಭ ಆರಂಭವಾಗಲಿದೆ. ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಎನ್.ಆರ್.ಪುರದ ಸಿಂಹಗದ್ದೆ ಬಸ್ತಿಮಠದ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಹಾಗೂ ವಾಸವಿ ಪೀಠಂನ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸುವರು. ಉಪಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಸಮಾರಂಭ ಉದ್ಘಾಟಿಸಲಿದ್ದು, ಕೇಂದ್ರ ಸಚಿವ ವಿ.ಸೋಮಣ್ಣ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಶಾಸಕರಾದ ಜಿ.ಬಿ.ಜ್ಯೋತಿಗಣೇಶ್, ಟಿ.ಬಿ.ಜಯಚಂದ್ರ, ಬಿ.ಸುರೇಶ್‌ಗೌಡ, ಕೆ.ಎನ್.ರಾಜಣ್ಣ, ಎಸ್.ಆರ್.ಶ್ರೀನಿವಾಸ್, ಆರ್.ರಾಜೇಂದ್ರ ಹಾಗೂ ಟಿಜಿಎಂಸಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ. ದಿವ್ಯಾನಂದಮೂರ್ತಿ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಮಧ್ಯಾಹ್ನ 3-30ಕ್ಕೆ ಹಿರೇಮಠದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಸಮಾರಂಭದಲ್ಲಿ 70 ವರ್ಷ ಮೇಲ್ಪಟ್ಟ ಹಿರಿಯ ಸದಸ್ಯರು, ಮಾಜಿ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಸನ್ಮಾನಿಸಲಾಗುವುದು. ಮಾಜಿ ಸಚಿವ ಸೊಗಡು ಶಿವಣ್ಣ, ಸಂಘದ ಮಾಜಿ ಅಧ್ಯಕ್ಷ ಟಿ.ಕೆ.ನಂಜುಂಡಪ್ಪ ಮತ್ತಿತರರು ಅತಿಥಿಗಳಾಗಿ ಭಾಗವಹಿಸುವರು ಎಂದು ತಿಳಿಸಿದರು.

1926ರಲ್ಲಿ ಡಿ.ಎಸ್.ಶಾಮರಾಜಪ್ಪ ಅವರ ಅಧ್ಯಕ್ಷತೆಯಲ್ಲಿ ಆರಂಭಗೊಂಡ ಧಾನ್ಯ ವ್ಯಾಪಾರಿಗಳ ಸಂಘವು 100 ವರ್ಷಗಳ ಸುದೀರ್ಘ ಅವಧಿಯಲ್ಲಿ ವರ್ತಕರ ಕುಂದುಕೊರತೆ ನಿವಾರಿಸುವುದರ ಜತೆಗೆ ಸಾಮಾಜಿಕ ಹಾಗೂ ಸಾರ್ವಜನಿಕ ಹಿತಾಸಕ್ತಿಯ ಉದ್ದೇಶದಿಂದ ಹಲವು ಯಶಸ್ವಿ ಸಂಸ್ಥೆಗಳನ್ನು ಹುಟ್ಟುಹಾಕಿದೆ.

1963ರಲ್ಲಿ ತುಮಕೂರಿನಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಲು ಸಿದ್ಧಗಂಗಾ ಮಠಕ್ಕೆ ತುಮಕೂರಿನ ವರ್ತಕ ಸಮುದಾಯ ಹತ್ತಾರು ಎಕರೆ ಭೂಮಿಯನ್ನು ದಾನ ನೀಡಿತ್ತು. ವಿದ್ಯಾರ್ಥಿಗಳ ನೆರವಿಗಾಗಿ ಸಂಘದ ಸದಸ್ಯರು ತಮ್ಮ ದೈನಂದಿನ ವ್ಯಾಪಾರದಲ್ಲಿ ನಾಲ್ಕಾಣೆಯಂತೆ ಸಂಗ್ರಹಿಸಿ, ಆಂದಿನ ಕಾಲದಲ್ಲೇ ಸುಮಾರು 2 ಲಕ್ಷ ರೂ.ಗೂ ಹೆಚ್ಚು ದೇಣಿಗೆ ನೀಡಿದ್ದರು ಎಂದು ಬಿ.ಎಲ್. ಚಂದ್ರಕೀರ್ತಿ ವಿವರಿಸಿದರು.

ವರ್ತಕರ ಆರ್ಥಿಕ ಅಭಿವೃದ್ಧಿಗೆ ಬೆನ್ನೆಲುಬಾಗಿ 1963ರಲ್ಲಿ ಟಿ.ಜಿ.ಎಂ.ಸಿ. ಬ್ಯಾಂಕ್ ಸ್ಥಾಪಿಸಲಾಯಿತು.

ಗ್ರೇನ್ ಮರ್ಚೆಂಟ್ಸ್ ಚಾರಿಟಬಲ್ ಟ್ರಸ್ಟ್ ಹಾಗೂ ಜಿ.ಎಂ.ಎಜುಕೇಷನ್ ಟ್ರಸ್ಟ್‌ಗಳನ್ನು ಸ್ಥಾಪಿಸಲಾಗಿದೆ. ಎಪಿಎಂಸಿ ಆವರಣದಲ್ಲಿರುವ ಪುರಾತನ ಶಿವ ದೇವಾಲಯವನ್ನು ಅಂದಾಜು 90 ಲಕ್ಷ ರೂ. ವೆಚ್ಚದಲ್ಲಿ ಜೀರ್ಣೋದ್ಧಾರಗೊಳಿಸಿ ಶ್ರೀ ಪಶುಪತಿನಾಥ ದೇವಾಲಯ ಟ್ರಸ್ಟ್ ರಚಿಸಲಾಗಿದೆ ಎಂದು ತಿಳಿಸಿದರು.

ಸಂಘದ ಉಪಾಧ್ಯಕ್ಷ ಸಿ.ಎಸ್.ನಂಜುಂಡಪ್ಪ, ಕಾರ್ಯದರ್ಶಿ ಕೆ.ವಿ.ಬೆಟ್ಟಯ್ಯ, ಜಂಟಿ ಕಾರ್ಯದರ್ಶಿ ಆರ್.ನಾಗಪ್ರಕಾಶ್, ಖಜಾಂಚಿ ನಟರಾಜ್ ಐವಾರ್, ನಿರ್ದೇಶಕರಾದ ಜಿ.ಎಚ್.ಪರಮಶಿವಯ್ಯ, ಟಿ.ಎಂ.ಚನ್ನಪ್ಪ, ಎ.ಆರ್.ಶ್ರೀನಾಥ್, ಎಚ್.ಎಸ್. ಸುರೇಶ್‌ಕುಮಾರ್, ಟಿ.ಹೆಚ್.ಪ್ರಸನ್ನಕುಮಾರ್, ಜಿ.ಸಿ.ಬಸವರಾಜು, ಜಿ.ಎಸ್.ಅರುಣಾಚಲಂ, ಎಂ.ಜಿ.ನಾಗೇಂದ್ರ, ಆರ್.ಎನ್. ಜ್ವಾಲನಪ್ಪ, ಸಿ. ಸರವಣನ್ ಹಾಗೂ ವ್ಯವಸ್ಥಾಪಕ ಸಿ.ಎನ್. ಉದಯ್‌ಕುಮಾರ್ ಹಾಜರಿದ್ದರು.

ದತ್ತಾಂಶ ಸಂಸ್ಕರಣೆ ಕುರಿತು ಐದು ದಿನಗಳ ಕಾರ್ಯಾಗಾರ

ಸುಧಾರಿತ ಪೈಥಾನ್ ತಂತ್ರಜ್ಞಾನಗಳ ಬಳಕೆಗೆ ಒತ್ತು



ತುಮಕೂರು: ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಮತ್ತು ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ರೊಬೊಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆ ವಿಭಾಗದ ವತಿಯಿಂದ ಸುಧಾರಿತ ಪೈಥಾನ್ ಪರಿಕಲ್ಪನೆಗಳು, ಕಡತ ನಿರ್ವಹಣೆ ಹಾಗೂ ದತ್ತಾಂಶ ಸಂಸ್ಕರಣೆ ಕುರಿತು ಐದು ದಿನಗಳ ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಲಾಯಿತು.

ಕ್ಯಾಂಪಸ್ ಸಭಾಂಗಣದಲ್ಲಿ ನಡೆದ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದ ಬೆಂಗಳೂರಿನ ನ್ಯೂರೋ ಟೆಕ್ ಎಲ್‌ಎಲ್‌ಪಿ ಸಂಸ್ಥೆಯ ಯೋಜನಾ ಮುಖ್ಯಸ್ಥ ತುಷಾರ್ ಎಸ್. ಮಾತನಾಡಿ, ಮೌಲ್ಯವರ್ಧಿತ ಕೋರ್ಸ್‌ಗಳ ಅಧ್ಯಯನದಿಂದ ಶೈಕ್ಷಣಿಕ ಗುಣಮಟ್ಟ ಸುಧಾರಿಸುತ್ತದೆ. ಸುಧಾರಿತ ಪೈಥಾನ್ ಪರಿಕಲ್ಪನೆಗಳನ್ನು ನೈಜ ಜಗತ್ತಿನ ಅನ್ವಯಗಳಿಗೆ ಬಳಸುವ ಮೂಲಕ ಪ್ರಾಯೋಗಿಕ ಕಲಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ಆ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದರು.

ಸುಧಾರಿತ ಪೈಥಾನ್ ಪರಿಕಲ್ಪನೆಗಳು, ಕಡತ ನಿರ್ವಹಣೆ, ದತ್ತಾಂಶಗಳ ಸಂಸ್ಕರಣೆ ಮತ್ತು ವಿಶ್ಲೇಷಣೆ, ದೃಶ್ಯೀಕರಣ, ಆಂತರ್ಜಾಲ ದತ್ತಾಂಶ ಸ್ವಯಂಚಾಲಿತಗೊಳಿಸುವಿಕೆ, ಸಂಕೇತ ಬರವಣಿಗೆ, ಕಿರು ಯೋಜನೆಗಳು ಹಾಗೂ ಪ್ರಕರಣ ಅಧ್ಯಯನಗಳು ನೈಜ ಜಗತ್ತಿನ ಅನ್ವಯಗಳಿಗೆ ಪೂರಕವಾಗಿವೆ ಎಂದು ತಿಳಿಸಿದರು.

ಶ್ರೀ ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಡಾ. ಮಹಂತೇಶ್ ಎಂ. ನಡಕಟ್ಟಿ ಮಾತನಾಡಿ, ಎಂಜಿನಿಯರಿಂಗ್ ಸಂಶೋಧನೆಗಳ ಮೂಲಕ ನೈಜ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಇಂದಿನ ಅಗತ್ಯವಾಗಿದೆ ಎಂದರು.

ಕಾರ್ಯಾಗಾರದ ಆಯೋಜನಾ ಸಮಿತಿ ಅಧ್ಯಕ್ಷರು ಹಾಗೂ ರೊಬೊಟಿಕ್ಸ್ ಮತ್ತು ಕೃತಕ ಬುದ್ಧಿಮತ್ತೆ ವಿಭಾಗದ ಮುಖ್ಯಸ್ಥೆ ಡಾ.ಸುಮನಾ ಎಲ್., ಅಧ್ಯಾಪಕ ಸಂಯೋಜಕರಾದ ಕೌಸರ್ ತಾಜ್ ಮತ್ತು ನರಸಿಂಹ ಎಚ್., ವಿಭಾಗದ ಪ್ರಾಧ್ಯಾಪಕರು, ಸದಸ್ಯರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಕಣ್ಣೂರು ಮಕ್ಕಳ ದೇವರ ಮಠದಲ್ಲಿ ವಿಜಯದಶಮಿಗೆ ತೆರೆ

ತುಮಕೂರು: ಸಮೀಪದ ಕಣ್ಣೂರು ಮಕ್ಕಳ ದೇವರ ಮಠದಲ್ಲಿ ನವರಾತ್ರಿ ಉತ್ಸವ ಭಕ್ತಿ, ಸಡಗರದಿಂದ ನೆರವೇರಿತು. ಇದರ ಅಂಗವಾಗಿ ವಿಜಯದಶಮಿಯಂದು ಜೋಡಿ ಗ್ರಾಮಗಳಾದ ಕಣ್ಣೂರು ಹಾಗೂ ಬೌಡಿಬೇಗೂರು ಗ್ರಾಮದ ಮಲ್ಲೇಶ್ವರಸ್ವಾಮಿ, ಬಸವೇಶ್ವರಸ್ವಾಮಿ ದೇವರುಗಳ ವೈಭವದ ಉತ್ಸವ ನಡೆಯಿತು.

ಕಣ್ಣೂರು ಮಕ್ಕಳ ದೇವರ ಮಠದ ಮೃತ್ಯುಂಜಯ ಸ್ವಾಮೀಜಿಗಳ ನೇತೃತ್ವದಲ್ಲಿ ಸಾಮೂಹಿಕ ಶಮಿ ಪೂಜೆ ನೆರವೇರಿತು. ಗ್ರಾಮದ ಜೋಡಿ ಪಟೇಲರಾದ ಜೈಶಂಕರ್ ಮತ್ತು ರುದ್ರೇಶ್ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿ, ಬನ್ನಿ ಮರ ಕಡಿದು ಗ್ರಾಮಸ್ಥರಿಗೆ ಬನ್ನಿ ಪತ್ರೆ ವಿತರಿಸಿದರು.

ಈ ವೇಳೆ ಮಾತನಾಡಿದ ಮಕ್ಕಳ ಮಠದ ಮೃತ್ಯುಂಜಯ ಸ್ವಾಮೀಜಿ, ದೇವಸ್ಥಾನಗಳು ಗ್ರಾಮದ ಶ್ರದ್ಧಾ, ಧಾರ್ಮಿಕ ಕೇಂದ್ರಗಳಾಗಿವೆ. ಗ್ರಾಮಸ್ಥರು ಭಾವೈಕ್ಯತೆಯಿಂದ ಸೇರಲು, ಧರ್ಮಶ್ರದ್ಧೆ ಬೆಳೆಸಲು ದೇವಸ್ಥಾನ ಪವಿತ್ರ ತಾಣವಾಗಿದೆ ಎಂದರು.

ದುಷ್ಟ ಸಂಹಾರ ಮಾಡಿ ವಿಜಯ ಆಚರಿಸುವ ಆಚರಣೆಯಾಗಿ ವಿಜಯದಶಮಿ ಆಚರಿಸಲಾಗುತ್ತಿದೆ. ಮನುಷ್ಯನಲ್ಲಿನ ಕೆಟ್ಟ ಗುಣಗಳನ್ನು ಸಂಹಾರ ಮಾಡಿ ಸದ್ಗುಣ ರೂಢಿಸಿಕೊಳ್ಳುವ ಸಂಕೇತವಾಗಿ ವಿಜಯದಶಮಿ ಆಚರಿಸಲಾಗುತ್ತಿದೆ. ಮೈಸೂರು ಅರಸರು ಆಚರಿಸಿದ ದಸರಾ ಇಂದು ಎಲ್ಲ ಗ್ರಾಮಗಳಲ್ಲೂ ಆಚರಿಸಲಾಗುತ್ತಿದೆ ಎಂದು ಹೇಳಿದರು.

ಹಿಂದೆ ರೈತರು ವ್ಯವಸಾಯ ಕೆಲಸಗಳಿಗೆ ಹೋಗುವಾಗ ತಮ್ಮ ಮಕ್ಕಳನ್ನು ಮಠದಲ್ಲಿ ಬಿಟ್ಟು ಹೋಗುತ್ತಿದ್ದರು. ಮಠದಲ್ಲಿ ಉಳಿಯುವ ಮಕ್ಕಳು ಸುರಕ್ಷಿತವಾಗಿ, ಸುಸಂಸ್ಕೃತವಾಗಿ ಬೆಳೆಯುತ್ತಾರೆ ಎಂಬ ನಂಬಿಕೆ ರೈತರಲ್ಲಿತ್ತು. ಆಗಿನಿಂದ ಈ ಮಠಕ್ಕೆ ಮಕ್ಕಳ ದೇವರ ಮಠ ಎಂದು ಹೆಸರು ಬಂದಿತು ಎಂದು ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಹೈನುಗಾರರ ಸೇವೆಗೆ 24 ತಾಸು ಶ್ರಮಿಸುವೆ: ಸಿ.ವಿ.ಮಹಲಿಂಗಯ್ಯ

ಪ್ರತಿದಿನ 1.22 ಲಕ್ಷ ಲೀಟರ್ ಹಾಲು ಪೂರೈಕೆ

ತುರುವೇಕೆರೆ: ತಾಲೂಕಿನ ಹೈನುಗಾರರ ಸೇವೆಗಾಗಿ ತಾವು ದಿನದ 24 ತಾಸು ಸಿದ್ಧರಿರುವುದಾಗಿ ಕೆಎಂಎಫ್ ನಿರ್ದೇಶಕ ಹಾಗೂ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕ ಸಿ.ವಿ.ಮಹಲಿಂಗಯ್ಯ ಹೇಳಿದರು.

ಎಪಿಎಂಸಿ ಆವರಣದ ನಂದಿನಿ ಕ್ಷೀರಭವನ ಸಭಾಂಗಣದಲ್ಲಿ ಸುಮಾರು 25 ಹೈನುಗಾರರಿಗೆ ರಾಸುಗಳ ಮರಣ ವಿಮೆಯ ಚೆಕ್ ವಿತರಿಸಿ ಅವರು ಮಾತನಾಡಿದರು.

ತಾಲೂಕಿನ ಹೈನುಗಾರರ ಆಶೀರ್ವಾದದಿಂದ 3 ಬಾರಿ ನಿರ್ದೇಶಕನಾಗಿ ಆಯ್ಕೆಯಾಗಿದ್ದು, ಒಮ್ಮೆ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷನಾಗಿ 5 ವರ್ಷ ಸೇವೆ ಸಲ್ಲಿಸಿದ್ದೇನೆ. ಈ ಅವಧಿಯಲ್ಲಿ ಹೈನುಗಾರರಿಗೆ ಹಾಲು ಒಕ್ಕೂಟದಿಂದ ದೊರೆಯುವ ಎಲ್ಲ ಸೌಲಭ್ಯಗಳನ್ನು ಮನೆ ಬಾಗಿಲಿಗೆ ತಲುಪಿಸುವ ಕಾರ್ಯ ಮಾಡಿದ್ದೇನೆ. ರಾಸುಗಳಿಗೆ 10 ಸಾವಿರದಿಂದ 75 ಸಾವಿರ ರೂ.ವರೆಗೆ ವಿಮೆ, ರಿಯಾಯಿತಿ ದರದಲ್ಲಿ ಮೇವು ಕತ್ತರಿಸುವ ಯಂತ್ರ, ರಬ್ಬರ್ ಹಾಳೆಗಳು, ಮೃತಪಟ್ಟ ಹೈನುಗಾರರ ಕುಟುಂಬಗಳಿಗೆ ಆರ್ಥಿಕ ನೆರವು, ಸಂಘದ ಸಿಬ್ಬಂದಿಗೆ ವಿಮೆ ಹಾಗೂ ಬಿತ್ತನೆ ಬೀಜ ವಿತರಣೆ ಸೇರಿದಂತೆ ಹಲವು ಸೇವೆಗಳನ್ನು ಪ್ರಾಮಾಣಿಕವಾಗಿ ಮಾಡಿದ್ದೇನೆ ಎಂದರು.

ತಾಲೂಕಿನಲ್ಲಿ ಸುಮಾರು 138 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ತಾವು ನಿರ್ದೇಶಕರಾಗುವ ಮುನ್ನ ಕೇವಲ 75 ಸಂಘಗಳಿದ್ದವು. ಈಗ ಜಿಲ್ಲೆಯಲ್ಲೇ ಅತಿ ಹೆಚ್ಚು ಸ್ವಂತ ಕಟ್ಟಡಗಳನ್ನು ಹೊಂದಿರುವ ತಾಲೂಕಾಗಿದ್ದು, ಉತ್ತಮ ಗುಣಮಟ್ಟದ ಹಾಲು ಶೇಖರಣೆಯಲ್ಲೂ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು.ಜಿಲ್ಲೆಯಲ್ಲಿ ಹೈನುಗಾರರ ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಲಾಗಿದ್ದು, ಸುಮಾರು 500 ವಿದ್ಯಾರ್ಥಿನಿಯರಿಗೆ ಉಚಿತ ಶಿಕ್ಷಣ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಸಾವಿರಾರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗಿದೆ. ತಾಲೂಕಿನ ಹೈನುಗಾರರ ಖಾತೆಗಳಿಗೆ ಪ್ರತಿ ತಿಂಗಳು ಸುಮಾರು 13.50 ಕೋಟಿ ರೂ. ನೇರವಾಗಿ ಜಮೆಯಾಗುತ್ತಿದ್ದು, ತಾಲೂಕಿನಲ್ಲಿ ಪ್ರತಿದಿನ ಸುಮಾರು 1.22 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ತಾಲೂಕಿನ ಹಲವು ರೈತರು ಖಾಸಗಿ ಡೇರಿಗಳಿಗೆ ಹಾಲು ಹಾಕಲು ಮುಂದಾಗಿದ್ದಾರೆ. ಇದನ್ನು ತಡೆಯಲು ನಂದಿನಿಯಿಂದ ದೊರೆಯುವ ಎಲ್ಲ ಸೌಲಭ್ಯಗಳ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡಬೇಕು. ಹೈನುಗಾರರ ಸೇವೆಗಾಗಿ ತಾವು ದಿನದ 24 ಗಂಟೆಯೂ ಸಿದ್ಧರಿರುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ 25 ಹೈನುಗಾರರಿಗೆ ಒಟ್ಟು 13.70 ಲಕ್ಷ ರೂ.ಗಳ ವಿಮಾ ಚೆಕ್ ವಿತರಿಸಲಾಯಿತು. ತಾಲೂಕು ಹಾಲು ಮುಖ್ಯಸ್ಥ ಮಂಜುನಾಥ್, ವಿಸ್ತರಣಾಧಿಕಾರಿಗಳಾದ ಕಿರಣ್ ಕುಮಾರ್ ಮತ್ತು ಸುನಿಲ್ ಉಪಸ್ಥಿತರಿದ್ದರು.

2016-17ನೇ ಸಾಲಿನ ನೇಮಕಾತಿ ಪ್ರಕ್ರಿಯೆ ಪರಿಶೀಲಿಸಲು ಒತ್ತಾಯ

ತುಮುಲ್ ನೇಮಕಾತಿ ಅಕ್ರಮದ ಸತ್ಯ ಹೊರಬರಲಿ

ತುಮಕೂರು: ತುಮಕೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಲ್ಲಿ (ತುಮುಲ್) 201617ನೇ ಸಾಲಿನಲ್ಲಿ ನಡೆದ ನೇರ ನೇಮಕಾತಿಯಲ್ಲಿ ಅಕ್ರಮಗಳು ನಡೆದಿರುವ ಶಂಕೆಯಿದ್ದು, ಇಡೀ ಪ್ರಕ್ರಿಯೆಯನ್ನು ಸ್ವತಂತ್ರ ಸಂಸ್ಥೆಯಿಂದ ತನಿಖೆ ನಡೆಸಬೇಕು ಎಂದು ನೇಮಕಾತಿಯಲ್ಲಿ ಪಾಲ್ಗೊಂಡಿದ್ದ ಅರುಣ್‌ಕುಮಾರ್, ವೆಂಕಟೇಶ್, ಶಾಂತಲಾ, ಶಾಂತರಾಜು, ರೇಣುಕಯ್ಯ, ಪುಟ್ಟರಾಜು, ರಜತ್ ಹಾಗೂ ಮಂಜುನಾಥ್ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹೆಚ್ಚು ಅಂಕ ಪಡೆದ ಅಭ್ಯರ್ಥಿಗಳನ್ನು ಕಡೆಗಣಿಸಿ ಕಡಿಮೆ ಅಂಕ ಪಡೆದವರಿಗೆ ಉದ್ಯೋಗ ನೀಡಲಾಗಿದೆ ಎಂದು ಆರೋಪಿಸಿದರು. ವೇಣುಗೋಪಾಲ್ 102 ಅಂಕ ಪಡೆದಿದ್ದರೆ, ಮಧುಸೂಧನ್ 77 ಅಂಕ ಪಡೆದಿದ್ದರು. ಆದರೆ, ವೇಣುಗೋಪಾಲ್ ಬದಲಿಗೆ ಮಧುಸೂಧನ್ ಅವರಿಗೆ ಉದ್ಯೋಗ ನೀಡಲಾಗಿತ್ತು. ಇದನ್ನು ಪ್ರಶ್ನಿಸಿ ವೇಣುಗೋಪಾಲ್ ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ನಲ್ಲಿ ಹೋರಾಟ ನಡೆಸಿ ಗೆಲುವು ಸಾಧಿಸಿದ್ದಾರೆ. ಇದೇ ರೀತಿ ಸುಮಾರು 35ರಿಂದ 40 ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ ಎಂದು ದೂರಿದರು.

ನೇಮಕಾತಿ ಪರೀಕ್ಷೆ ಮತ್ತು ಸಂದರ್ಶನದ ಅಂಕಗಳನ್ನು ಪರಿಶೀಲಿಸಲು ಮೂಲ ದಾಖಲೆಗಳನ್ನು ಕೇಳಿದರೆ, ಅವು ಕಳೆದುಹೋಗಿವೆ ಎಂಬ ಉತ್ತರ ನೀಡಲಾಗುತ್ತಿದೆ. ಅಕ್ಟೋಬರ್ 14ರಂದು ಇಬ್ಬರು ಮಹಿಳಾ ಸಿಬ್ಬಂದಿ ಪರೀಕ್ಷೆಗೆ ಸಂಬಂಧಿಸಿದ ದಾಖಲೆಗಳ ನಕಲು ಮಾಡಿರುವುದು ಸಿಸಿಟಿವಿ ದೃಶ್ಯಾವಳಿಯಲ್ಲಿ ದಾಖಲಾಗಿದ್ದರೂ, ಅವರ ವಿರುದ್ಧ ಕ್ರಮ ಕೈಗೊಳ್ಳಲು ತುಮುಲ್ ಆಡಳಿತ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿದರು.

ಕೆಲ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗದಿದ್ದರೂ ಅಂಕ ನೀಡಲಾಗಿದೆ ಎಂಬ ಆರೋಪವಿದೆ. ನಕಲಿ ದಾಖಲೆಗಳ ಬಳಕೆ, ಮೀಸಲಾತಿ ನಿಯಮಗಳ ಪಾಲನೆ, ರೋಸ್ಟರ್ ಹಾಗೂ ಮೆರಿಟ್ ಆಧಾರದಲ್ಲಿ ಆಯ್ಕೆ ನಡೆದಿದೆಯೇ ಎಂಬುದನ್ನು ಸಮಗ್ರವಾಗಿ ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ಮೂಲ ಅಂಕಪಟ್ಟಿಗಳು, ಉತ್ತರ ಪತ್ರಿಕೆಗಳು, ಸಂದರ್ಶನದ ಅಂಕಗಳು, ಆಯ್ಕೆಪಟ್ಟಿಗಳು ಹಾಗೂ ನೇಮಕಾತಿ ಸಮಿತಿಯ ದಾಖಲೆಗಳನ್ನು ಪರಿಶೀಲಿಸಿ, ಅಕ್ರಮಗಳು ದೃಢಪಟ್ಟರೆ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಅನ್ಯಾಯಕ್ಕೊಳಗಾದ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಬೇಕು ಎಂದರು.ನೇಮಕಾತಿ ಅಕ್ರಮಗಳ ಕುರಿತು ದೂರು ನೀಡಿದ ಬಳಿಕ ತುಮುಲ್ ಆಡಳಿತ ಮಂಡಳಿ ರಚಿಸಿದ ತನಿಖಾ ತಂಡ ಯಾವುದೇ ತನಿಖೆ ನಡೆಸಿಲ್ಲ ಎಂದು ಆರೋಪಿಸಿದ ಅವರು, ಕನಿಷ್ಠ ಅಂಕ ಗಳಿಸದವರು ಹಾಗೂ ಸಂದರ್ಶನಕ್ಕೆ ಹಾಜರಾಗದವರು ಹೇಗೆ ನೇಮಕಗೊಂಡರು ಎಂಬುದನ್ನು ಬಹಿರಂಗ ಪಡಿಸಬೇಕು. ಕೆಪಿಎಸ್‌ಸಿ ನೇಮಕಾತಿ ಅಕ್ರಮಗಳ ತನಿಖೆಯ ಮಾದರಿ ಯಲ್ಲಿ ತುಮುಲ್‌ನ 2016 17ನೇ ಸಾಲಿನ ನೇಮಕಾತಿ ಯನ್ನೂ ತನಿಖೆಗೆ ಒಳಪಡಿಸಬೇಕು ಎಂದು ಆಗ್ರಹಿಸಿದರು.

ಪೌರ ಕಾರ್ಮಿಕರ ಆರೋಗ್ಯ ಕಾಳಜಿಗೆ ಚಾಲುಕ್ಯ ಆಸ್ಪತ್ರೆ ಸಾಥ್

ಗುಬ್ಬಿ: ಪಟ್ಟಣದ ಸ್ವಚ್ಛತೆ ಕಾಪಾಡುವ

ಅ.26 ರಂದು ಮಹರ್ಷಿ ವಾಲ್ಮೀಕಿ ಜಯಂತಿ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಸಮಾರಂಭವು ಅಕ್ಟೋಬರ್, 26 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರ ಸ್ವಾಮಿ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಆರ್. ಮೆಹರೋಜ್ ಖಾನ್, ವಿಧಾನ ಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಸಿ.ಎಸ್.ಅರುಣ್ ಮಾಚಯ್ಯ, ಮಡಿಕೇರಿ ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ತೀತಿರ ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಪಿರಿಯಾಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಬಿ.ನಂಜುಂಡಸ್ವಾಮಿ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಎನ್.ಬಿಂದುಮಣಿ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಯ ಯೋಜನಾ ಸಮನ್ವಯಾಧಿಕಾರಿ ಎಚ್.ಸಿ.ಭಾಗೀರಥಿ, ಇತರರು ಪಾಲ್ಗೊಳ್ಳಲಿದ್ದಾರೆ.

ಅ.23 ರಂದು ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ

ಮಡಿಕೇರಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಅಕ್ಟೋಬರ್, 23 ರಂದು ಬೆಳಗ್ಗೆ 11 ಗಂಟೆಗೆ ನಗರದ ಗಾಂಧಿ ಭವನದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಜಯಂತಿ ಕಾರ್ಯಕ್ರಮ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರ ಸ್ವಾಮಿ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ವಿಧಾನ ಪರಿಷತ್ ಶಾಸಕರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಮಡಿಕೇರಿ ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾದ ತೀತಿರ ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್, ಕೊಡಗು ಜಿಲ್ಲಾ ಮಹಿಳಾ ಬರಹಗಾರರ ಸಂಘದ ಅಧ್ಯಕ್ಷರಾದ ಪುದಿಯನೆರವನ ರೇವತಿ ರಮೇಶ್, ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್, ಜಿ.ಪಂ.ಸಿಇಒ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಹೆಚ್ಚುವರಿ ಜಿಲ್ಲಾಧಿಕಾರಿ ಡಾ.ಸಹನ ಎಸ್. ಹಾದಿಮನಿ, ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಕುಮಾರ ಇತರರು ಪಾಲ್ಗೊಳ್ಳಲಿದ್ದಾರೆ.

ಅ.23 ರಂದು ನಗರಸಭೆ ಕೌನ್ಸಿಲ್ ಸಾಮಾನ್ಯ ಸಭೆ

ಮಡಿಕೇರಿ: ಮಡಿಕೇರಿ ನಗರಸಭೆ ಕೌನ್ಸಿಲ್‌ನ ಸಾಮಾನ್ಯ ಸಭೆಯು ನಗರಸಭೆ ಅಧ್ಯಕ್ಷರಾದ ಪಿ.ಕಲಾವತಿ ಅವರ ಅಧ್ಯಕ್ಷತೆಯಲ್ಲಿ ಅಕ್ಟೋಬರ್, 23 ರಂದು ಬೆಳಗ್ಗೆ 11.30 ಗಂಟೆಗೆ ನಗರಸಭಾ ಕೌನ್ಸಿಲ್ ಸಭಾಂಗಣದಲ್ಲಿ ನಡೆಯಲಿದೆ ಎಂದು ನಗರಸಭೆ ಪೌರಾಯುಕ್ತರಾದ ಎಚ್.ಆರ್.ರಮೇಶ್ ಅವರು ತಿಳಿಸಿದ್ದಾರೆ.

ಅ.26 ರಂದು ಸಾಮೂಹಿಕ ಸತ್ಯನಾರಾಯಣ ಪೂಜೆ

ಮಡಿಕೇರಿ: ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಅಕ್ಟೋಬರ್, 26 ರಂದು ಸಂಜೆ 4 ಗಂಟೆಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ. ಆದ್ದರಿಂದ ಎಲ್ಲಾ ಭಕ್ತಾದಿಗಳು ದೇವಾಲಯದಲ್ಲಿ ನಡೆಯಲಿರುವ ಸಾಮೂಹಿಕ ಸತ್ಯನಾರಾಯಣ ಪೂಜೆಯಲ್ಲಿ ಭಾಗವಹಿಸಿ ಪೂಜೆಯನ್ನು ಯಶಸ್ವಿಗೊಳಿಸಬೇಕಾಗಿ ದೇವಾಲಯದ ವ್ಯವಸ್ಥಾಪನ ಸಮಿತಿ ಅಧ್ಯಕ್ಷರಾದ ಪ್ರಥ್ಯೂ ಬಿ.ಎನ್. ಅವರು ಕೋರಿದ್ದಾರೆ.

ಮೈಶುಗರ್ ಕಾರ್ಖಾನೆ ಅಧ್ಯಕ್ಷ ಮತ್ತು ಎಂಡಿ ಯನ್ನು ವಜಾ ಮಾಡಿ

ಮಂಡ್ಯ: ಮೈಶುಗರ್ ಕಾರ್ಖಾನೆಯಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿ ಭ್ರಷ್ಟಾಚಾರದ ಬಗ್ಗೆ ಸರ್ಕಾರದ ಎಲ್ಲಾ ಹಂತಗಳಲ್ಲಿ ಲಿಖಿತವಾಗಿ ದೂರು ಕೊಟ್ಟರೂ ಇದುವರೆಗೆ ಯಾವುದೇ ಉತ್ತರ ಬಂದಿಲ್ಲ. ಕೂಡಲೇ ಎಚ್ಚೆತ್ತುಕೊಂಡು ಅಧ್ಯಕ್ಷರನ್ನು ಮತ್ತು ಎಂಡಿ ಅವರನ್ನು ವಜಾ ಮಾಡಿ, ಕಾರ್ಖಾನೆಯನ್ನು ಗಂಗಣ್ಣ–ಮಂಗಣ್ಣನಿಂದ ಉಳಿಸಿಕೊಡಬೇಕು ಎಂದು ನಗರಸಭೆ ಮಾಜಿ ಸದಸ್ಯ,ಸಾಮಾಜಿಕ ಕಾರ್ಯಕರ್ತ ಶಿವಕುಮಾರ್ ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಶುಗರ್ ಹೋರಾಟಕ್ಕೆ ತಾರ್ಕಿಕ ಅಂತ್ಯ ಬೇಕು ಯಾವುದೇ ಪಕ್ಷದ ವ್ಯಕ್ತಿಗಳು, ಮಾಜಿ ಅಧ್ಯಕ್ಷರು, ಹಾಲಿ ಅಧ್ಯಕ್ಷರು, ನಿರ್ದೇಶಕರು, ಆಡಳಿತ ಮಂಡಳಿಯವರು ಯಾರೇ ತಪ್ಪು ಮಾಡಿದ್ದರೂ ಕ್ರಮ ಆಗಬೇಕು ಎಂಬುದು ನಮ್ಮ ಸ್ಪಷ್ಟ ಉದ್ದೇಶ ಎಂದು ಅವರು ಹೇಳಿದರು.

ಸರ್ಕಾರ ಜನವರಿಯಲ್ಲಿ ತನಿಖೆಗೆ ಆದೇಶ ಮಾಡಿ ಮೇ 30 ರೊಳಗೆ ತನಿಖೆ ಮುಕ್ತಾಯಗೊಳಿಸಲು ಹೇಳಿತ್ತು. 90 ದಿನಕ್ಕಿಂತ ಮೇಲಾಗಿದೆ, ಆದರೂ ತನಿಖಾ ವರದಿಯನ್ನು ಸಂಪುಟ ಸಭೆಗೆ ಇಡದೆ ವಿಳಂಬ ಮಾಡುತ್ತಿರುವ ಉಸ್ತುವಾರಿ ಸಚಿವರು ಮತ್ತು ಅಧ್ಯಕ್ಷರು ಉತ್ತರ ಹೇಳಬೇಕು. ವ್ಯವಸ್ಥಾಪಕ ನಿರ್ದೇಶಕ

ಮಂಗಲ್ ದಾಸ್ ಅವರಿಗೆ ನಾವು ಐದು ಬಾರಿ ಜ್ಞಾಪನಾ ಮನವಿಪತ್ರ ಕೊಟ್ಟಿದ್ದೇವೆ, ಉತ್ತರ ಕೊಟ್ಟಿಲ್ಲ..ಶಾಸಕರಾದ ಗಣಿಗ ರವಿಕುಮಾರ್ ಅವರು ಲಿಖಿತವಾಗಿ ಕೊಟ್ಟರೆ ಕ್ರಮ ವಹಿಸುತ್ತೇವೆ ಎಂದಿದ್ದರಿಂದ ನಾನೇ ಖುದ್ದು 150 ಕೋಟಿಗಿಂತ ಹೆಚ್ಚು ಭ್ರಷ್ಟಾಚಾರದ ಬಗ್ಗೆ 24 ಪ್ರಶ್ನೆಗಳನ್ನು ಒಳಗೊಂಡ ದೂರನ್ನು ಲಿಖಿತವಾಗಿ ಕೊಟ್ಟು ಸಹಿ ಹಾಕಿಸಿಕೊಂಡು ಬಂದಿದ್ದೇನೆ. ಅಧ್ಯಕ್ಷರು ಅಕ್ಟೋಬರ್ 5, 2026 ರಂದು 112 ಕೋಟಿ, 127 ಕೋಟಿ ಅಂಕಿ–ಅಂಶಗಳ ಪ್ರಕಟಣೆ ಹೊರಡಿಸಿದ್ದಾರೆ. ಭ್ರಷ್ಟಾಚಾರ ಬಯಲಾಗಲು ಬಹುಮುಖ್ಯವಾಗಿರುವುದು ಬ್ಯಾಂಕ್ ಸ್ಟೇಟ್‌ಮೆಂಟ್, ಅದನ್ನು ಕೇಳಿದರೆ ಆರ್‌ಟಿಐ ಕಾರ್ಯಕರ್ತರನ್ನು ಮೂದಲಿಸುತ್ತಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಅವರು ಸೆಪ್ಟೆಂಬರ್ 3, 2026 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರೂ ಉತ್ತರ ಬಂದಿಲ್ಲ. ರೋಹಿಣಿ ಸಿಂಧೂರಿ ಅವರು ಜುಲೈ 17, 2026 ರಂದು 5 ಕೋಟಿಗಿಂತ ಹೆಚ್ಚಿನ ಬಿ–ಮಿಲ್ ವಿಚಾರವನ್ನು ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿಲ್ಲ ಎಂದು ಪತ್ರ ಬರೆದಿದ್ದರೂ ಉತ್ತರ ಇಲ್ಲ. ಸೆಪ್ಟೆಂಬರ್ 9, 2026 ರಂದು ಪ್ರಭಾರಿ ನಿರ್ದೇಶಕ ಮಂಗಲದಾಸ್ ಅವರಿಗೂ ಪತ್ರ ಬರೆದಿದ್ದರೂ ಪ್ರತಿಕ್ರಿಯೆ ಇಲ್ಲ ಎಂದು ಅವರು ಹೇಳಿದರು.

ಕಾರ್ಖಾನೆಯ ತಾಂತ್ರಿಕ ಲೋಪದ ಬಗ್ಗೆಯೂ ಅವರು ಪ್ರಶ್ನಿಸಿ, 2019ರಲ್ಲೇ 5000 ಟನ್ ಯೋಜನೆ ಪೂರ್ಣವಾಗಿದೆ ಎನ್ನುತ್ತಾರೆ, ಆದರೆ ಪ್ರತಿ ದಿನ ಮೂರುವರೆ ಸಾವಿರ ಟನ್ ಅರೆಯುತ್ತೇನೆ ಎಂದು ಹೇಳಿ ಮೂರು ತಿಂಗಳಲ್ಲಿ 3 ಲಕ್ಷದ 15 ಸಾವಿರ ಟನ್ ಅರೆಯಬೇಕಿತ್ತು, ಆದರೆ ಮಾಡಿರುವುದು 1 ಲಕ್ಷದ 72 ಸಾವಿರದ 285 ಟನ್ ಮಾತ್ರ. ಶ್ರೇಯ ಕಂಪನಿಗೆ ಯಾಕೆ ಮತ್ತೆ ಹಣ ಪಾವತಿಸುತ್ತಿದ್ದೀರಿ ಎಂದು ಪ್ರಶ್ನಿಸಿದರು.ಉಸ್ತುವಾರಿ ಸಚಿವರು ಕೂಡಲೇ ಇಬ್ಬರನ್ನು ವಜಾ ಮಾಡಿ, ಜಿಲ್ಲಾಧಿಕಾರಿಗಳನ್ನು ತಾತ್ಕಾಲಿಕವಾಗಿ ನೇಮಿಸಿ, ನಂತರ ಕಾಯಂ ಸರ್ಕಾರಿ ಅಧಿಕಾರಿಯನ್ನು ನೇಮಿಸಿ ಮೈಶುಗರ್ ಉಳಿಸಬೇಕು ಎಂದು ಅವರು ಮನವಿ ಮಾಡಿದರು.

ಸರ್ಕಾರಕ್ಕೆ ಶಿವಕುಮಾರ್ ಮನವಿ

ಪತ್ರಿಕಾಗೋಷ್ಠಿಯಲ್ಲಿ ಅನಿಲ್ ಕುಮಾರ್,ಹರೀಶ್,ಸುನಿಲ್,ಬೇಲೂರು ಬೊಮ್ಮೇಶ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಕಬ್ಬಿಗೆ ಟನ್ ಗೆ 5,500 ರೂ. ನೀಡಿ, ರೈತರ ಬೆಳೆಸಾಲ ಮನ್ನಾ ಮಾಡಿ

ಮಂಡ್ಯ: ಬೆಳಗಾವಿಯಲ್ಲಿ ನಡೆಯುತ್ತಿರುವ ಕಬ್ಬು ಬೆಳೆಗಾರರ ಹೋರಾಟಕ್ಕೆ ಬೆಂಬಲ ನೀಡಿ, ಕಬ್ಬಿಗೆ ಉತ್ತಮ ಬೆಲೆ ನೀಡಬೇಕು ಹಾಗೂ ರೈತರ ಎಲ್ಲಾ ಬೇಡಿಕೆಗಳನ್ನು ಸರ್ಕಾರ ಈಡೇರಿಸಬೇಕು ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಇಂಡವಾಳು ಚಂದ್ರಶೇಖರ್ ಅವರು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಲವು ಸಕ್ಕರೆ ಕಾರ್ಖಾನೆಗಳು ಬೇರೆ ಜಿಲ್ಲೆಗಳಿಂದ ಕಬ್ಬನ್ನು ತಂದು ಅರೆಯಿಸುವುದನ್ನು ಮೊದಲು ನಿಲ್ಲಿಸಬೇಕು. ತನ್ನ ವ್ಯಾಪ್ತಿಯ ಕಬ್ಬನ್ನು ಸಂಪೂರ್ಣವಾಗಿ ಮುಗಿಸಿದ ನಂತರವೇ ಹೊರ ಜಿಲ್ಲೆಯ ಕಬ್ಬನ್ನು ನುರಿಸಬೇಕು ಎಂದು ಆಗ್ರಹಿಸಿದರು.

ಬೆಳೆ ಹಾಕಬೇಡಿ ಎಂದು ಹೇಳುವ ಸರ್ಕಾರಗಳು ಈಗಾಗಲೇ ರೈತರು ಪಡೆದಿರುವ ಬೆಳೆ ಸಾಲ ಮತ್ತು ಸಹಕಾರ ಸಂಘಗಳ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕು. ಮಂಡ್ಯ ಜಿಲ್ಲೆಯಲ್ಲಿ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗ ಸೃಷ್ಟಿಸಲು ಕೈಗಾರಿಕೆಗಳನ್ನು ಸ್ಥಾಪಿಸಬೇಕು ಎಂದು ಅವರು ಒತ್ತಾಯಿಸಿದರು.

ಕೈಗಾರಿಕೆ ಸ್ಥಾಪಿಸಿ ನಿರುದ್ಯೋಗಿ ಯುವಕರಿಗೆ ಕೆಲಸ ಕೊಡಿ–ಮಂಜೇಶ್‌ಗೌಡ ರೈತ ಸಂಘದ ಪ್ರಧಾನ ಕಾರ್ಯದರ್ಶಿ

ಮಂಜೇಶ್ ಗೌಡ ಮಾತನಾಡಿ ಅವರು, ಬೆಳಗಾವಿ ಚಳುವಳಿಗೆ ಮತ್ತು ಕಬ್ಬಿನ ದರ ಹೆಚ್ಚಳದ ಬೇಡಿಕೆಗೆ ಸಂಪೂರ್ಣ ಬೆಂಬಲವಿದೆ. ಮಂಡ್ಯ ಜಿಲ್ಲೆಯ ಕಬ್ಬು ಬೆಳೆಗಾರರು ಹೆಚ್ಚಿನ ಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸಿದ್ದಾರೆ ಎಂದರು.ಕನಿಷ್ಠ ಸಕ್ಕರೆ ಬೆಲೆಯನ್ನು 61 ರೂ.ಗೆ ಹೆಚ್ಚಿಸಬೇಕು ಮತ್ತು ರೈತರಿಗೆ ಟನ್ ಕಬ್ಬಿಗೆ 5,500 ರೂ. ದರ ನೀಡಬೇಕೆಂದು ಅವರು ಆಗ್ರಹಿಸಿದರು. ಪ್ರಸಕ್ತ ಸಾಲಿನ ಕಬ್ಬಿಗೆ ಟನ್ ಒಂದಕ್ಕೆ ರೂ. 5,500/– ಗಳಂತೆ ಎಫ್‌ಆರ್‌ಪಿ ಯನ್ನು ಕೇಂದ್ರ ಸರ್ಕಾರ ನಿಗದಿಗೊಳಿಸಬೇಕು. ಕೇಂದ್ರ ಸರ್ಕಾರವು ಪ್ರಸಕ್ತ ಸಾಲಿಗೆ ಕನಿಷ್ಠ ಸಕ್ಕರೆ ಬೆಲೆಯನ್ನು ರೂ.60/– ಗಳಿಗೆ ಹೆಚ್ಚಿಸಿ ಘೋಷಣೆ ಮಾಡಬೇಕು. ಕಬ್ಬಿನ ಇಳುವರಿಯನ್ನು ಈ ಹಿಂದೆಯೇ ನಿಗದಿಪಡಿಸಿದ್ದ 9.5 ರಷ್ಟು ನಿಗದಿಗೊಳಿಸಬೇಕು. ಜನ ಪ್ರತಿನಿಧಿಯಾಗಿ ಕೇಂದ್ರ ಸಚಿವರಾಗಿ ಎರಡು ವರ್ಷಗಳು ಕಳೆದಿದೆ ಮಂಡ್ಯ ಜಿಲ್ಲೆಯಲ್ಲಿ ಕೈಗಾರಿಕೆಯನ್ನು ಸ್ಥಾಪಿಸಿ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಿಕೊಡುತ್ತೇನೆಂದು ಹಲವಾರು ಬಾರಿ ಹೇಳಿರುತ್ತೀರಿ. ಈ ದಿಶೆಯಲ್ಲಿ ಅಂತಹ ಯಾವ ಪ್ರಯತ್ನವೂ ಆಗಿಲ್ಲ. ಎರಡು ಮೂರು ಪದವಿ ಪಡೆದಿರುವ ಸಾವಿರಾರು ನಿರುದ್ಯೋಗಿ ಯುವಕರು ಉದ್ಯೋಗದ ಹುಡುಕಾಟದಲ್ಲಿದ್ದಾರೆ. ನಿಮ್ಮ ಅಧಿಕಾರವನ್ನು ಬಳಸಿ ಜಿಲ್ಲೆಯ ವಿದ್ಯಾವಂತ ಯುವಕರಿಗೆ ಉದ್ಯೋಗ ಕೊಡಿಸಿಕೊಡಬೇಕೆಂದು ಕೇಂದ್ರ ಸಚಿವ ಹೆಚ್.ಡಿ.ಕು ಮಾರಸ್ವಾಮಿಯವರನ್ನು ಒತ್ತಾಯಿಸಿದರು.

ಇಂಡುವಾಳು ಚಂದ್ರಶೇಖರ್ ಆಗ್ರಹ

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ರೈತ ಸಂಘದ ಮಾಧ್ಯಮ ಕಾರ್ಯದರ್ಶಿ ಸೊ.ಶಿ.ಪ್ರಕಾಶ್, ಅಣ್ಣೂರು ಮಹೇಂದ್ರ, ಬೂದನೂರು ಪುಟ್ಟಸ್ವಾಮಿ, ಕೀಳಘಟ್ಟ ನಂಜುಂಡಯ್ಯ, ಕೆ. ನಾಗೇಂದ್ರಸ್ವಾಮಿ ಮತ್ತಿತರರು ಭಾಗವಹಿಸಿದ್ದರು.

ಸೂರ್ಯಕಾಂತಿ ಖರೀದಿ ಕೇಂದ್ರಗಳ ಸ್ಥಾಪನೆ : ರೈತರು ನೋಂದಣಿಗೆ ಮನವಿ

ಚಾಮರಾಜನಗರ: ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ 2026–27ನೇ ಸಾಲಿನಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿ ಖರೀದಿಸಲು ಜಿಲ್ಲೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪ್ರಾಂಗಣಗಳಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರ ನೋಂದಣಿ ಕಾರ್ಯವು ಅಕ್ಟೋಬರ್ 23ರಿಂದ ಪ್ರಾರಂಭಗೊಳ್ಳಲಿದೆ.

ಮುಂಗಾರು ಹಂಗಾಮಿನಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಎಫ್.ಎ.ಕ್ಯೂ. ಗುಣಮಟ್ಟದ ಸೂರ್ಯಕಾಂತಿ ಖರೀದಿಸಲು ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಾಲ್‌ಗೆ 8,343 ರೂ. ಗಳಂತೆ ದರ ನಿಗದಿಪಡಿಸಿದ್ದು, ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳ ನಿಯಮಿತ (ಕೆಓಎಫ್) ಬೆಂಗಳೂರು ಸಂಸ್ಥೆ ವತಿಯಿಂದ ಖರೀದಿ ಮಾಡಲಾಗುವುದು.

ಚಾಮರಾಜನಗರ ಹಾಗೂ ಗುಂಡ್ಲುಪೇಟೆ ತಾಲೂಕಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಪ್ರಾಂಗಣ ಮತ್ತು ತೆರಕಣಾಂಬಿ ಉಪ

ಮಾರುಕಟ್ಟೆ ಪ್ರಾಂಗಣದಲ್ಲಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದ್ದು, ರೈತರು ನೋಂದಣಿ ಮಾಡಿಕೊಳ್ಳಬಹುದು.

ನೋಂದಣಿ ಪ್ರಕ್ರಿಯೆಗೆ ಪಹಣಿ, ಆರ್.ಟಿ.ಸಿ, ಆಧಾರ್, ಆಧಾರ್ ಜೋಡಣೆಯಾದ ಬ್ಯಾಂಕ್ ಪಾಸ್ ಪುಸ್ತಕದ ಜೆರಾಕ್ಸ್, ಭಾವಚಿತ್ರ ಹಾಗೂ ಫ್ರೂಟ್ಸ್ ತಂತ್ರಾಂಶದ ರೈತ ನೋಂದಣಿ ಸಂಖ್ಯೆ (ಎಫ್.ಐಡಿ) ಯನ್ನು ಕಡ್ಡಾಯವಾಗಿ ತರಬೇಕು. ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ ಅಥವಾ ತಾಲ್ಲೂಕಿನ ಕೃಷಿ ಇಲಾಖೆಯಿಂದ ಫ್ರೂಟ್ಸ್ ತಂತ್ರಾಂಶದ ರೈತ ನೋಂದಣಿ ಸಂಖ್ಯೆ (ಎಫ್.ಐ.ಡಿ) ಯನ್ನು ಪಡೆಯಬೇಕು.

ಬೆಳೆ ಸಮೀಕ್ಷೆಯಲ್ಲಿ ಸೂರ್ಯಕಾಂತಿ ಬೆಳೆ ಎಂದು ಆರ್.ಟಿಸಿ ವಾರು ನಮೂದಾಗಿರುವ ರೈತರು ಮಾತ್ರ ಯೋಜನೆಗೆ ಅರ್ಹರಾಗಿರುತ್ತಾರೆ. ಈ ಯೋಜನೆಯಡಿ ಎಕರೆಗೆ 4 ಕ್ವಿಂಟಾಲ್ ಹಾಗೂ ಪ್ರತಿ ರೈತರಿಂದ 20 ಕ್ವಿಂಟಾಲ್ ಪ್ರಮಾಣದ ಎಫ್.ಎ.ಕ್ಯೂ ಗುಣಮಟ್ಟದ ಸೂರ್ಯಕಾಂತಿಯನ್ನು ಮಾತ್ರ ಖರೀದಿಸಲಾಗುವುದು. ರೈತರ ಹೆಸರಿನ ಆಧಾರ್ ಸಂಖ್ಯೆಗೆ ಜೋಡಣೆಗೊಂಡ ಬ್ಯಾಂಕ್ ಖಾತೆಗೆ ಮಾತ್ರ ಡಿಬಿಟ ಮೂಲಕ ಹಣ ಪಾವತಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕರು, ಕೃಷಿ ಮಾರಾಟ ಇಲಾಖೆಯ ಉಪ ನಿರ್ದೇಶಕರು, ಕರ್ನಾಟಕ ಸಹಕಾರ ಎಣ್ಣೆಬೀಜ ಬೆಳೆಗಾರರ ಮಹಾ ಮಂಡಳ ನಿಯಮಿತದ ಸಹಾಯಕ ವ್ಯವಸ್ಥಾಪಕರು–ಮೊ.ಸಂ 8073093473 ಹಾಗೂ ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾರ್ಯದರ್ಶಿಗಳು ಮೊ.ಸ



ಸಿನಿಮಾ ವರದಿ: ಬಿ.ಜಿ.ರವಿಕುಮಾರ್

ಭಾರತೀಯ ಸಿನಿಮಾದ ಹೊಸ ಇತಿಹಾಸ:

ಹಾಲಿವುಡ್ ಮಟ್ಟಕ್ಕೆ ಸವಾಲು ಹಾಕಲಿದೆ 'ರಾಮಾಯಣ'

ಇದು ಭಾರತೀಯ ಸಿನಿರಂಗದ ಪಾಲಿಗೆ ಒಂದು ಐತಿಹಾಸಿಕ ಕ್ಷಣ ಹಾಗೂ ಪ್ರತಿಯೊಬ್ಬ ಭಾರತೀಯನಿಗೂ ಅತ್ಯಂತ ಹೆಮ್ಮೆಯ ವಿಷಯ. ಭಾರತೀಯ ಚಿತ್ರರಂಗದಲ್ಲಿ ಎಂದೂ ಕಂಡರಿಯದ, ಮುಟ್ಟದ ಎತ್ತರದಲ್ಲಿ ನಮ್ಮದೇ ಆದ 'ರಾಮಾಯಣ' ಮಹಾಕಾವ್ಯವು ಈಗ ವಿಶ್ವಮಟ್ಟದಲ್ಲಿ ಸಿದ್ಧಗೊಂಡಿದೆ. ಇದು ಹಾಲಿವುಡ್ ಚಿತ್ರಗಳಿಗೂ ಸವಾಲು ಒಡ್ಡುವಂತಹ ಬೃಹತ್ ಪ್ರಮಾಣದ ದೃಶ್ಯ ವೈಭವವನ್ನು ಹೊಂದಿದೆ.

ಇತ್ತೀಚೆಗೆ ಬಿಡುಗಡೆಯಾಗಿರುವ ಅಂತರರಾಷ್ಟ್ರೀಯ ಮಟ್ಟದ ಟ್ರೇಲರ್ ಚಿತ್ರದ ದೃಷ್ಟಿಕೋನ ಮತ್ತು ಅದ್ಧೂರಿತನವನ್ನು ಜಗತ್ತಿಗೆ ಸಾರಿದೆ. ನಿರ್ಮಾಪಕ ನಮಿತ್ ಮಲ್ಹೋತ್ರಾ ಅವರು ಭಾರತೀಯ ಸಿನಿಮಾದ ಸಾಮರ್ಥ್ಯ ಏನು ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಈ ಬರುವ ದೀಪಾವಳಿಯಂದು ಅಂದರೆ ನವೆಂಬರ್ 5 ರಂದು, ಇಡೀ ವಿಶ್ವವೇ ಒಂದು ಅಸಾಧಾರಣ ಸಿನೆಮಾ ಅನುಭವಕ್ಕೆ ಸಾಕ್ಷಿಯಾಗಲಿದೆ. ಇಲ್ಲಿಂದ ಮುಂದಕ್ಕೆ ಭಾರತೀಯ ಚಿತ್ರರಂಗದ ಮಟ್ಟ ಮತ್ತಷ್ಟು ಎತ್ತರಕ್ಕೆ ಏರಲಿದೆ.



ಈ ಚಿತ್ರದ ಮತ್ತೊಂದು ವಿಶೇಷ ಆಕರ್ಷಣೆಯೆಂದರೆ ಇದು ಅತ್ಯಾಧುನಿಕ 3ಆ ತಂತ್ರಜ್ಞಾನದಲ್ಲಿ ಮೂಡಿಬರುತ್ತಿದೆ. ಇದು ಪ್ರೇಕ್ಷಕರಿಗೆ, ಅದರಲ್ಲೂ ವಿಶೇಷವಾಗಿ ಮಕ್ಕಳಿಗೆ ಮತ್ತು ಕುಟುಂಬದವರಿಗೆ ದೊಡ್ಡ ಅಚ್ಚರಿಯಾಗಲಿದೆ. ಬೆಳ್ಳಿತೆರೆಯ ಮೇಲೆ ಈ ಅದ್ಭುತ 3ಆ ದೃಶ್ಯಗಳನ್ನು ಕಣ್ತುಂಬಿಕೊಳ್ಳಲು ಪ್ರೇಕ್ಷಕರು ಮುಗಿಬೀಳಲಿದ್ದು, ಇದು ಸಿನಿರಂಗದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ಗ್ರಾಸವಾಗಲಿದೆ. ಈ ದೀಪಾವಳಿಗೆ ಥಿಯೇಟರ್‌ಗಳಲ್ಲಿ ಕಣ್ತುಂಬಿಕೊಳ್ಳಲೇಬೇಕಾದ ಅದ್ಭುತ ಅನುಭವ ಇದಾಗಲಿದೆ.

ಡಿಸೆಂ11ಕ್ಕೆ 'ಹುಬ್ಬಳ್ಳಿ ಹಂಟರ್ಸ್'!

ನಿರ್ಮಾಪಕ ಸಂತೋಷ್ ಕುಮಾರ್ ಕೆ.ಸಿ. ನಿರ್ಮಾಣದ 'ಹುಬ್ಬಳ್ಳಿ ಹಂಟರ್ಸ್' ಡಿಸೆಂ 11ಕ್ಕೆ ಬಿಡುಗಡೆ ಆಗಲಿದೆ.

ನಿರ್ದೇಶಕ ಸಮರ್ಥ್ ಬಿ. ಕಡಕೊಳ್ ಆಕ್ಷನ್ ಕಟ್ ಹೇಳಿದ್ದಾರೆ.

ಉತ್ತರ ಕರ್ನಾಟಕದ ಸೊಗಡು ಸಂಸ್ಕೃತಿ ಒಳಗೊಂಡ ಈ ಚಿತ್ರ ಹುಬ್ಬಳ್ಳಿಯಲ್ಲೇ ಮುಹೂರ್ತ ನೆರವೇರಿಸಿ ಕೊಂಡು ಮೊದಲ ಹಂತದಲ್ಲಿ ಹುಬ್ಬಳ್ಳಿಯ ಪ್ರಮುಖ ಸ್ಥಳಗಳಲ್ಲಿ ಮತ್ತು ನಂತರ ಶಿರಸಿ ಹಾಗೂ ಧಾರವಾಡದ ಸುಂದರ, ನೈಜ ತಾಣಗಳಲ್ಲೇ ಚಿತ್ರೀಕರಣ ನಡೆಸಿದೆ.

ಪ್ರಮೋದ್ ಶೆಟ್ಟಿ,ಚೇತನ್ ಮಾರಂಬೀಡ್, ಪವನ್ ಕುಲಕರ್ಣಿ, ಸುಮಿತ್ ಸಂಕೋಜಿ, ನಮನ್ ಅರೋರ, ಧನ್ಯಶ್ರೀ ಸುಜಿತ್, ವನು ಪಾಟೀಲ್ ದೀಪಕ್ ರಾವ್, ಶಿವು ಗುಂಡಣ್ಣನವರ್, ವಿನಯ್ ದೊಡ್ಡಮನಿ.ಪವನ್ ಅಣ್ಣೆಗೇರಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿ ಕೊಂಡಿದ್ದಾರೆ.

ನಟರಾದ ಅಚ್ಯುತ್ ಕುಮಾರ್, ಕೃಷ್ಣ ಹೆಬ್ಬಾಳೆ, ರಮೇಶ್ ಭಟ್ ಚಿತ್ರದ ತಾರಾಗಣ ಇದೆ.

ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಜನಪ್ರಿಯತೆ ಗಳಿಸಿರುವ ಕಂಟೆಂಟ್ ಕ್ರಿಯೇಟರ್ಸ್ ಈ ಚಿತ್ರದ ಮೂಲಕ ದೊಡ್ಡ ಪರದೆಗೆ ಬಣ್ಣ ಹಚ್ಚುತ್ತಿರುವುದು ವಿಶೇಷ.

ನಿರ್ದೇಶಕ ಸಮರ್ಥ್ ಬಿ. ಕಡಕೊಳ್ ಈ ಚಿತ್ರಕ್ಕೆ ಕಥೆ ಬರೆದಿದ್ದು, ರಾಹುಲ್ ವಿ. ಪರ್ವತಿಕರ್, ಅಮಿತ್ ಕಾರ್ವರ್ ಮತ್ತು ಚೇತನ್ ಮರಂಬೀದ್ ಅವರೊಂದಿಗೆ ಜಂಟಿಯಾಗಿ ಸಂಭಾಷಣೆ ಹೆಣೆದಿದ್ದಾರೆ.

ಒರಿಜಿನಲ್ ಮಾನ್ ಸ್ಟರ್"(OM) ಚಿತ್ರದಲ್ಲಿ ವಸಿಷ್ಠ ಸಿಂಹ

ಆರ್ ಚಂದ್ರು, "ಒರಿಜಿನಲ್ ಮಾನ್ ಸ್ಟರ್"(ಔಒ) ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ.

ಯಮುನ ಚಂದ್ರು ಹಿಂದಿ ಹಾಗೂ ಕನ್ನಡ ಎರಡು ಭಾಷೆಗಳಲ್ಲಿ ಏಕಕಾಲಕ್ಕೆ ನಿರ್ಮಾಣಮಾಡುತ್ತಿರುವ ಈ ಚಿತ್ರದಲ್ಲಿ ಶಿವರಾಜಕುಮಾರ್ ನಾಯಕರಾಗಿ ನಟಿಸುತ್ತಿದ್ದಾರೆ ಚಿತ್ರ ಆರಂಭದಿಂದಲೂ ಕುತೂಹಲ ಮೂಡಿಸಿದೆ. ಈ ಚಿತ್ರದಲ್ಲಿ ತಮ್ಮ ಅಮೋಘ ಅಭಿನಯ ಹಾಗೂ ಕಂಚಿನ ಕಂಠದಿಂದ ಜನಪ್ರಿಯರಾಗಿರುವ ಹೆಸರಾಂತ ನಟ ವಸಿಷ್ಠ ಸಿಂಹ ಅಭಿನಯಿಸುತ್ತಿದ್ದಾರೆ. ವಸಿಷ್ಠ ಸಿಂಹ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಈ ವಿಷಯವನ್ನು ತಿಳಿಸಿರುವ ಆರ್ ಸಿ ಸ್ಟುಡಿಯೋಸ್ ಸಂಸ್ಥೆ ವಿಶೇಷ ಪೋಸ್ಟರ್ ಬಿಡಿಗಡೆ ಮಾಡಿ ವಸಿಷ್ಠ ಸಿಂಹ ಅವರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದೆ. ಬಹು ನಿರೀಕ್ಷಿತ ಈ ಚಿತ್ರಕ್ಕೆ ಮೊದಲ ಹಂತದ ಚಿತ್ರೀಕರಣ ಪೂರ್ಣವಾಗಿದ್ದು, ಇದೇ ತಿಂಗಳ 25 ರಿಂದ ಎರಡನೇ ಹಂತದ ಚಿತ್ರೀಕರಣ ಆರಂಭವಾಗಲಿದೆ. ಕರುನಾಡ ಚಕ್ರವರ್ತಿ ಶಿವರಾಜಕುಮಾರ್, ತೆಲುಗು ನಟ ಸುನೀಲ್ ಹಾಗೂ ವಸಿಷ್ಠ ಸಿಂಹ ಎರಡನೇ ಹಂತದ ಚಿತ್ರೀಕರಣದಲ್ಲಿ ಭಾಗವಹಿಸುತ್ತಿದ್ದಾರೆ.

ಈಗಾಗಲೇ ಶಿವಣ್ಣ ಹಾಗೂ ವಸಿಷ್ಠ ಸಿಂಹ ಕಾಂಬಿನೇಶನ್ ನಲ್ಲಿ ಮೂಡಿಬಂದಿರುವ "ಮಫ್ತಿ", "ಟಗರು" ಹಾಗೂ "ಕವಚ" ಚಿತ್ರಗಳು ಎಲ್ಲರ ಮನ ಗೆದ್ದಿದ್ದು, ಈಗ "ಔಒ" ಚಿತ್ರದಲ್ಲಿ ಶಿವರಾಜಕುಮಾರ್ ಅವರ ಜೊತೆಗೆ ವಸಿಷ್ಠ ಸಿಂಹ ನಟಿಸುತ್ತಿದ್ದಾರೆ. ಈ ಚಿತ್ರದಲ್ಲಿ ವಸಿಷ್ಠ ಸಿಂಹ ಅವರ ಪಾತ್ರ ಏನಿರಬಹುದು ಎಂಬ ಕುತೂಹಲ ಅಭಿಮಾನಿಗಳಲ್ಲಿ ಮನೆ ಮಾಡಿದೆ. ಶಿವರಾಜಕುಮಾರ್, ವಸಿಷ್ಠ ಸಿಂಹ ಹಾಗೂ ಆರ್ ಚಂದ್ರು ಅವರ ಕಾಂಬಿನೇಶನ್ ನಲ್ಲಿ ಬರುತ್ತಿರುವ ಈ ಚಿತ್ರದ ಬಗ್ಗೆ ಹೆಚ್ಚಿನ ನಿರೀಕ್ಷೆ ಇದೆ. ಹಲವು ವಿಶೇಷಗಳಿಗೆ ಸಾಕ್ಷಿಯಾಗಿರುವ ಹಾಗೂ "ಒರಿಜಿನಲ್ ಮಾನ್ ಸ್ಟರ್(OM) ಶೀರ್ಷಿಕೆಯಿಂದಲೇ ಕುತೂಹಲ ಮೂಡಿಸಿರುವ ಈ ಚಿತ್ರ ಚಿತ್ರೀಕರಣ ಸಮಯದಲ್ಲೇ ಎಲ್ಲರ ಗಮನ ಸೆಳೆಯುತ್ತಿದೆ. ಆರ್ ಚಂದ್ರು ಅವರ ನಿರ್ದೇಶನದಲ್ಲಿ ಅಭಿನಯಿಸಬೇಕೆಂದು ಬಹಳ ದಿನಗಳಿಂದ ಕಾಯುತ್ತಿದ್ದೆ. ಈಗ ಅವಕಾಶ ಸಿಕ್ಕಿದೆ. ಆರ್ ಚಂದ್ರು ಅವರ ಜೊತೆಗೆ ಕೆಲಸ ಮಾಡುತ್ತಿರುವುದು ಹಾಗೂ ಶಿವಣ್ಣ ಅವರ ಜೊತೆಗೆ ನಟಿಸುತ್ತಿರುವುದು ಬಹಳ ಖುಷಿಯಾಗಿದೆ ಎಂದು ವಸಿಷ್ಠ ಸಿಂಹ ತಿಳಿಸಿದ್ದಾರೆ. ಅಜನೀಶ್ ಲೋಕನಾಥ್ ಸಂಗೀತ ನಿರ್ದೇಶನ ಹಾಗೂ ಎ ಜೆ ಅವರ ಛಾಯಾಗ್ರಹಣ ಈ ಚಿತ್ರಕ್ಕಿದೆ. ಶಿವರಾಜಕುಮಾರ್ ನಾಯಕರಾಗಿ ನಟಿಸುತ್ತಿರುವ ಈ ಚಿತ್ರದ ಪ್ರಮುಖಪಾತ್ರಗಳಲ್ಲಿ ತೆಲುಗು ನಟ ಸುನೀಲ್ ಹಾಗೂ ವಸಿಷ್ಠ ಸಿಂಹ ಅವರು ಅಭಿನಯಿಸುತ್ತಿದ್ದಾರೆ. ಇಷ್ಟೇ ಅಲ್ಲದೆ ಎಲ್ಲಾ ಭಾಷೆಗಳ ಜನಪ್ರಿಯ ಕಲಾವಿದರು "ಔಒ" ಚಿತ್ರದಲ್ಲಿ ಅಭಿನಯಿಸಿಲಿದ್ದಾರೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು ಮುಂದಿನ ದಿನಗಳಲ್ಲಿ ನೀಡುವುದಾಗಿ ನಿರ್ದೇಶಕ ಆರ್ ಚಂದ್ರು ತಿಳಿಸಿದ್ದಾರೆ.

"ತಾಯ್ತ" ಚಿತ್ರ ಅಕ್ಟೋ 30ಕ್ಕೆ ತೆರೆಗೆ

ನಟ ಸಂಗೀತ ನಿರ್ದೇಶಕ ಲಯಕೋಕಿಲ ಚೊಚ್ಚಲ ನಿರ್ದೇಶನದ, ನಿರ್ಮಿಸಿರುವ ಹಾಗೂ ರಿಯಾನ್ – ಹರ್ಷಿಕಾ ಪೂಣಚ್ಚ ನಾಯಕ – ನಾಯಕಿಯಾಗಿ ನಟಿಸಿರುವ "ತಾಯ್ತ" ಚಿತ್ರ ಅಕ್ಟೋಬರ್ 30ರಂದು ಬಿಡುಗಡೆಯಾಗುತ್ತಿದೆ. ಇದೀಗ ಚಿತ್ರದ ಟ್ರೇಲರ್ ಅನಾವರಣವಾಗಿದೆ. ಛಾ.ಮ ಹರೀಶ್ ಟ್ರೇಲರ್ ಬಿಡುಗಡೆ ಮಾಡಿದರು.

ಸಿರಿ ಮ್ಯೂಸಿಕ್ ಮೂಲಕ ಟ್ರೇಲರ್ ಬಿಡುಗಡೆಯಾಗಿದೆ.

ಇದು ನನ್ನ ಮೊದಲ ನಿರ್ದೇಶನದ ಚಿತ್ರ. ಇದೊಂದು ಸಂಪೂರ್ಣ ಹಾರಾರ್ ಜಾನರ್ ನ ಚಿತ್ರವಲ್ಲ. ಲವ್ ಜಾನರ್ ನ ಚಿತ್ರ, ಕಾಮಿಡಿ ಹಾಗೂ ಥ್ರಿಲ್ಲರ್ ಕೂಡ ಇದೆ. ನಿರ್ಮಾಪಕ ಶಾಹಿದ್ ಅವರು ಕಥೆ ಬರದಿದ್ದಾರೆ. ಚಿತ್ರಕಥೆ, ಸಂಭಾಷಣೆ ಬರೆದು ಸಂಗೀತ ಸಂಯೋಜನೆ ಹಾಗೂ ನಿರ್ದೇಶನವನ್ನು ನಾನು ಮಾಡಿದ್ದೇನೆ. ರಿಯಾನ್ ಈ ಚಿತ್ರದ ನಾಯಕನಾಗಿ, ಹರ್ಷಿಕಾ ಪೂಣಚ್ಚ ನಾಯಕಿಯಾಗಿ ನಟಿಸಿದ್ದಾರೆ. ನನ್ನ ಮಗಳು ಭಾನುಪ್ರಿಯ ಕೂಡ ಅಭಿನಯಿಸಿದ್ದಾರೆ. ಸಾಧುಕೋಕಿಲ, ಶೋಭ್ ರಾಜ್, ಶಾಹಿದ್, ಕರಿಸುಬ್ಬು, ಪುಷ್ಪಾಸ್ವಾಮಿ, ರೋಜಾ, ಸಿಮ್ರಾನ್, ಲಾವಣ್ಯ, ಸಹನಾ ಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ. ನಾನು ಕೂಡ ನಟಿಸಿದ್ದೇನೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದೆ. ಆನಂದ್ ಹಾಗೂ ಗಗನ್ ಗೌಡ ಛಾಯಾಗ್ರಹಣ, ವಿಜಯ್ ಎಂ ಕುಮಾರ್ ಸಂಕಲನ ಈ ಚಿತ್ರಕ್ಕಿದೆ. ಅಕ್ಟೋಬರ್ 30ರಂದು ನಮ್ಮ ಚಿತ್ರ ನಿಮ್ಮ ಮುಂದೆ ಬರಲಿದೆ. ನೋಡಿ ಹಾರೈಸಿ ಎಂದರು ನಿರ್ದೇಶಕ, ಸಂಗೀತ ನಿರ್ದೇಶಕ ಹಾಗೂ ನಟ ಲಯಕೋಕಿಲ.

ನಾಯಕಿ ಹರ್ಷಿಕಾ ಪೂಣಚ್ಚ, ಮಾತನಾಡಿ, ಈ ಚಿತ್ರ ಅಕ್ಟೋಬರ್ 30 ರಂದು ತೆರೆಗೆ ಬರುತ್ತಿದೆ. ಈ ಚಿತ್ರ ತೆರೆಗೆ ಬರಲು ಲಯಕೋಕಿಲ ಅವರ ಶ್ರಮ ಬಹಳಷ್ಟಿದೆ. ತುಂಬಾ ಜನ ಕಲಾವಿದರು ಅಭಿನಯಿಸಿರುವ ಚಿತ್ರವಿದು. ನನ್ನ ಪಾತ್ರ ಕೂಡ ಚೆನ್ನಾಗಿದೆ ಎಂದರು.

ನಾಯಕ ರಿಯಾನ್ ಮಾತನಾಡಿ, ನನಗೆ ಸಮಾರಂಭವೊಂದರಲ್ಲಿ ಸಿಕ್ಕ ಲಯಕೋಕಿಲ ಅವರು, ನೀವು ಅಭಿನಯ ಮಾಡಿ ಎಂದು ಹೇಳಿದರು. ಅವರು ಹೇಳಿದ ಹಾಗೆ ಅವರ ನಿರ್ದೇಶನದ ಚಿತ್ರದಲ್ಲೇ ನಾನು ನಾಯಕನಾಗಿ ನಟಿಸಿದ್ದೇನೆ. ನಮ್ಮ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ ಎಂದರು.

'ಪ್ರೇಮದ ಊರಲಿ' ಚಿತ್ರತಂಡದ ಯಶಕ್ಕೆ ಯಶ್ ಅಭಿನಂದನೆ

'ಪ್ರೇಮದ ಊರಲಿ' ಚಿತ್ರದ ಯಶಸ್ಸಿಗೆ ಯಶ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬಾಕ್ಸ್ ಆಫೀಸ್‌ನಲ್ಲಿ ನಿರೀಕ್ಷೆಗೂ ಮೀರಿದ ದಾಖಲೆ ಬರೆಯುತ್ತಿರುವ ಚಿತ್ರತಂಡವನ್ನು ಯಶ್ ಖುದ್ದಾಗಿ ಭೇಟಿಗೆ ಆಹ್ವಾನಿಸಿದರು.

ಚಿತ್ರದ ಗೆಲುವಿಗೆ ಬೆನ್ನುತಟ್ಟಿ, ಮುಂದಿನ ಪಯಣಕ್ಕೆ ಹೃತ್ಪೂರ್ವಕ ಶುಭ ಹಾರೈಸಿದರು.

ಈ ಅಭಿನಂದನೆ ಚಿತ್ರತಂಡಕ್ಕೆ ಹೊಸ ಹುರುಪು ಹಾಗೂ ಸ್ಫೂರ್ತಿ ತುಂಬಿದೆ.

ಮನೋಜ್ ಕುಮಾರ್ ನಿರ್ದೇಶನ, ರಂಗಾಯಣ ರಘು, ಶ್ರೀರಾಮ್, ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ನಟನೆ ಇಲ್ಲಿದೆ. ಭಾವನಾತ್ಮಕ ಕಥಾಹಂದರ ಹಾಗೂ ಕಲಾವಿದರ ಅದ್ಭುತ ಅಭಿನಯದಿಂದ ಕನ್ನಡಿಗರ ಹೃದಯ ಗೆದ್ದಿರುವ ಈ ಚಿತ್ರ, ಕೇವಲ ಬಾಯಿಮಾತಿನ ಪ್ರಚಾರದ ಬಲದಿಂದಲೇ ಚಿತ್ರಮಂದಿರಗಳತ್ತ ಜನಸಾಗರ ಹರಿದುಬರುವಂತೆ ಮಾಡಿದೆ.

ಚಿತ್ರತಂಡದ ಶ್ರಮವನ್ನು ಗುರುತಿಸಿ ಬೆಂಬಲಿಸುವ ಯಶ್ ಅವರ ಈ ಪ್ರೋತ್ಸಾಹದ ನಡೆಗೆ ಚಿತ್ರತಂಡ ತುಂಬು ಹೃದಯದ ಕೃತಜ್ಞತೆ ಸಲ್ಲಿಸಿದೆ.

ವಿಶೇಷವೆಂದರೆ, 'ಜೈಲರ್ 2' ಮತ್ತು 'ರಣಬಾಲಿ'ಯಂತಹ ಭಾರೀ ಬಜೆಟ್‌ನ ಬಿಗ್ ರಿಲೀಸ್‌ಗಳು ಎದುರಾಗಿದ್ದರೂ 'ಪ್ರೇಮದ ಊರಲಿ' ಸಿನಿಮಾದ ಅಬ್ಬರ ಕಿಂಚಿತ್ತೂ ತಗ್ಗಿಲ್ಲ. ಘಟಾನುಘಟಿ ಪರಭಾಷಾ ಮತ್ತು ಸ್ವಭಾಷಾ ಚಿತ್ರಗಳ ಪೈಪೋಟಿಯ ನಡುವೆಯೂ ರಾಜ್ಯಾದ್ಯಂತ ಹೌಸ್‌ಫುಲ್ ಪ್ರದರ್ಶನಗಳನ್ನು ಕಾಣುತ್ತಾ ತನ್ನ ಗಟ್ಟಿ ನೆಲೆಯನ್ನು ಉಳಿಸಿಕೊಂಡಿದೆ.

'ಮಿಸ್ ಮ್ಯಾಚ್' ಚಿತ್ರದ ಮೊದಲ ಹಾಡು 'ಚಲಿಸಿತು ಮೋಡ'

ವಿಜಯದಶಮಿಯ ಸಂಭ್ರಮದ ಸಂದರ್ಭದಲ್ಲಿ 'ಮಿಸ್ ಮ್ಯಾಚ್' ಚಿತ್ರದ ಮೊದಲ ಹಾಡು 'ಚಲಿಸಿತು ಮೋಡ' ಅನಾವರಣಗೊಂಡಿದೆ. ಪ್ರೀತಿ ಮೊಳೆಯುವ ಸುಂದರ ಕ್ಷಣಗಳನ್ನು ಮಧುರವಾಗಿ ಕಟ್ಟಿಕೊಡುವ ಈ ಹಾಡು, ಇಂದಿನ ಪೀಳಿಗೆಯ ಮನಸ್ಸಿಗೆ ಹತ್ತಿರವಾಗುವ ಭರವಸೆ ಮೂಡಿಸಿದೆ. ವಿಶೇಷವೆಂದರೆ, ಇದು ತೇಜಸ್ ಪಬ್ಲಿಕೇಷನ್ಸ್ ಹೊಸದಾಗಿ ಆರಂಭಿಸಿರುವ ಸಂಗೀತ ಮುದ್ರಿಕೆಯ ಮೊದಲ ಬಿಡುಗಡೆಯೂ ಹೌದು.

ಜೂಡಾ ಸ್ಯಾಂಡಿ ಸಂಗೀತ ಸಂಯೋಜಿಸಿರುವ ಈ ಗೀತೆಗೆ ನಾಗಾರ್ಜುನ್ ಶರ್ಮ ಸಾಹಿತ್ಯ ಬರೆದಿದ್ದು, ಶ್ರೀಲಕ್ಷ್ಮಿ ಬೆಳ್ಳಣ್ಣು ತಮ್ಮ ಸುಮಧುರ ಧ್ವನಿಯಲ್ಲಿ ಹಾಡಿದ್ದಾರೆ. ಮುಂಜಾನೆಯ ಹೊಂಗಿರಣದಂತೆ ಪ್ರೀತಿಯ ಹೊಸ ಭಾವನೆಗಳನ್ನು ಮೂಡಿಸುವ 'ಚಲಿಸಿತು ಮೋಡ' ಹಾಡು ತೇಜಸ್ ಪಬ್ಲಿಕೇಷನ್ಸ್‌ನ ಯೂಟ್ಯೂಬ್ ವಾಹಿನಿಯಲ್ಲಿ ಲಭ್ಯವಿದೆ. ಚಿತ್ರದ ಸಂಪೂರ್ಣ ಆಲ್ಬಂನ ಸಂಗೀತ ಹಕ್ಕುಗಳೂ ಸಂಸ್ಥೆಯ ಬಳಿಯೇ ಇವ

ಒಂದು ಕವನ ಸಂಕಲನದಿಂದ ಆರಂಭವಾದ ಹದಿನಾಲ್ಕು ವರ್ಷಗಳ ಪಯಣ ಇದೀಗ ಸಂಗೀತ ಲೋಕದತ್ತ ಹೊಸ ಹೆಜ್ಜೆಯಿಟ್ಟಿದೆ. 2012ರಲ್ಲಿ ಎಂಜಿನಿಯರಿಂಗ್ ಪದವಿ ಪೂರ್ಣಗೊಳಿಸಿದ್ದ ತೇಜಸ್ ವೆಂಕಟೇಶ್ ಅವರು 'ಭಾವೋದ್ವೇಗಗಳ ಪ್ರತಿಬಿಂಬ' ಎಂಬ ತಮ್ಮ ಮೊದಲ ಕನ್ನಡ ಕವನ ಸಂಕಲನವನ್ನು ಪ್ರಕಟಿಸುವ ಮೂಲಕ 'ತೇಜಸ್ ಪಬ್ಲಿಕೇಷನ್ಸ್' ಸಂಸ್ಥೆಯನ್ನು ಆರಂಭಿಸಿದ್ದರು.

ಒಂದು ದಶಕಕ್ಕೂ ಹೆಚ್ಚು ಕಾಲ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಕ್ಷೇತ್ರದಲ್ಲಿ ಕೆಲಸ ಮಾಡಿದ ಅವರು, ಆ ಕ್ಷೇತ್ರದಿಂದ ವಿರಾಮ ಪಡೆದು 'ಮಿಸ್ ಮ್ಯಾಚ್' ಚಿತ್ರದ ನಿರ್ಮಾಣದ ಮೂಲಕ ಚಿತ್ರರಂಗಕ್ಕೆ ಪ್ರವೇಶಿಸಿದ್ದಾರೆ. ಇದೀಗ ತಮ್ಮದೇ ಸಂಗೀತ ಮುದ್ರಿಕೆಯನ್ನು ಆರಂಭಿಸುವ ಮೂಲಕ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ.

ಈ ಕುರಿತು ಮಾತನಾಡಿರುವ ತೇಜಸ್ ವೆಂಕಟೇಶ್, "ತೇಜಸ್ ಪಬ್ಲಿಕೇಷನ್ಸ್‌ನ ಪ್ರತಿಯೊಂದು ಹೊಸ ಅಧ್ಯಾಯವೂ ಸವಾಲುಗಳೊಂದಿಗೆ ಆರಂಭವಾಗಿದೆ. 2012ರಲ್ಲಿ 'ಭಾವೋದ್ವೇಗಗಳ ಪ್ರತಿಬಿಂಬ' ಕವನ ಸಂಕಲನದ ಮೂಲಕ ಆರಂಭವಾದ ನಮ್ಮ ಪಯಣ ಇಂದು 'ಮಿಸ್ ಮ್ಯಾಚ್' ಚಿತ್ರದವರೆಗೆ ಬಂದಿದೆ. ತಂತ್ರಜ್ಞಾನ ಕ್ಷೇತ್ರದಿಂದ ವಿರಾಮ ಪಡೆದು, ನನಗೆ ಸಂಪೂರ್ಣ ನಂಬಿಕೆಯಿರುವ ಪ್ರತಿಭಾವಂತ ತಂಡದೊಂದಿಗೆ ಈ ಚಿತ್ರವನ್ನು ನಿರ್ಮಿಸಿದ್ದೇನೆ. ಜೂಡಾ ಸ್ಯಾಂಡಿ ಸಂಯೋಜಿಸಿದ ಸಂಗೀತವನ್ನು ಕೇಳಿದಾಗ ನಮ್ಮದೇ ಸಂಗೀತ ಮುದ್ರಿಕೆಯ ಮೂಲಕ ಆಲ್ಬಂ ಬಿಡುಗಡೆ ಮಾಡಬೇಕೆಂಬ ಆಲೋಚನೆ ಮೂಡಿತು. 'ಮಿಸ್ ಮ್ಯಾಚ್' ನಮ್ಮ ಮೊದಲ ಆಲ್ಬಂ. ಮುಂದಿನ ದಿನಗಳಲ್ಲಿ ಯುವ ಕಲಾವಿದರು, ಗಾಯಕರು ಹಾಗೂ ಗೀತರಚನೆಕಾರರು ತಮ್ಮ ಪ್ರತಿಭೆಯನ್ನು ಪರಿಚಯಿಸಿಕೊಳ್ಳುವ ವೇದಿಕೆಯಾಗಿ ಈ ಸಂಗೀತ ಮುದ್ರಿಕೆ ಬೆಳೆಯಬೇಕು ಎಂಬುದು ನಮ್ಮ ಆಶಯ," ಎಂದಿದ್ದಾರೆ.

ಪ್ರತಿಭಾವಂತ ಕಲಾವಿದರ ಸಂಗಮ

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಹಾಗೂ ಹಿನ್ನೆಲೆ ಗಾಯನ ಕ್ಷೇತ್ರದಲ್ಲಿ ಗುರುತಿಸಿಕೊಂಡಿರುವ ಶ್ರೀಲಕ್ಷ್ಮಿ ಬೆಳ್ಳಣ್ಣು, 'ಸಪ್ತ ಸಾಗರದಾಚೆ ಎಲ್ಲೋ' ಚಿತ್ರದ 'ಕಡಲನು' ಹಾಡಿನ ಮೂಲಕ ಜನಪ್ರಿಯರಾಗಿದ್ದಾರೆ. ಗೀತರಚನೆಕಾರ ನಾಗಾರ್ಜುನ್ ಶರ್ಮ ಅವರು 'ಅವನೇ ಶ್ರೀಮನ್ನಾರಾಯಣ' ಚಿತ್ರದ 'ಹ್ಯಾಂಡ್ಸ್ ಅಪ್', 'ನಾರಾಯಣ ನಾರಾಯಣ' ಹಾಗೂ 'ಕವಲುದಾರಿ' ಚಿತ್ರದ 'ನಿಗೂಢ' ಸೇರಿದಂತೆ ಹಲವು ಜನಪ್ರಿಯ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ.

ಮಲೆನಾಡಿನ ಹಿನ್ನೆಲೆಯಲ್ಲಿ 'ಮಿಸ್ ಮ್ಯಾಚ್'

ನಿರ್ದೇಶಕ ಸಾಯಿ ಶ್ರೀನಿಧಿ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ 'ಮಿಸ್ ಮ್ಯಾಚ್' ಮಲೆನಾಡಿನ ಹಿನ್ನೆಲೆಯಲ್ಲಿ ನಡೆಯುವ ಕೌಟುಂಬಿಕ ಪ್ರಣಯ ಹಾಸ್ಯಮಯ ಚಿತ್ರವಾಗಿದೆ. ಕೌಶಿಕ್ ಗೌಡ ಮತ್ತು ಅಶ್ವಿತಾ ಹೆಗ್ಡೆ ನಾಯಕ-ನಾಯಕಿಯಾಗಿ ಅಭಿನಯಿಸಿದ್ದು, ತೇಜೇಶ್, ಅಮೃತ